WPP-47

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೭	ಬೆಂಗಳೂರು, ಗುರುವಾರ, ಮೇ ೩, ೨೦೧೨ (ವೈಶಾಖ ೧೩, ಶಕ ವರ್ಷ ೧೯೩೪)	ಸಂಚಿಕೆ ೧೮

ಭಾಗ – ೫

ಸರ್ಕಾರದ ಮತ್ತು ಖಾಸಗಿ ಜಾಹೀರಾತುಗಳು, ಲೋಕಸೇವಾ ಆಯೋಗದ ಜಾಹೀರಾತುಗಳು, ನೇಮಕಾತಿ ಸಮಿತಿಗಳ ಜಾಹೀರಾತುಗಳು

IN THE COURT OF THE HON'BLE IV ADDL. CITY CIVIL JUDGE MAYO HALL AT BANGALORE CITY

P. & S.C. NO. 25055/2011, Hg. DATE: 30-05-2012.

1. K. Revanna S/o. Kuppannaiah
2. Renuka D/o.K. Revanna
3. Rekha D/o.K. Revanna
4. R. Shivakumar S/o.K. Revanna.

All are residing at No.3.13.004,I.S.R.O. Quarters Domlur Layout, Bangalore-560071. **….. PETITIONERS**

V/S

NIL **…. RESPONDENT**

PUBLIC NOTICE

WHEREAS, the Petitioners above named filed an application under Part X Section 372 of the Indian Succession Act 1925, for grant of succession certificate in respect of amount lying in the Oriental Insurance Company Limited, Leo Shopping Complex, 44/45, Residency Road Cross, Bangalore- 560025 of the deceased PUTTAMMA, who died on 06.12.2010 at Bangalore.

Be it known that no caveat has been entered and that the said petition is posted for hearing on 30th May 2012 at 11.a.m. in the above court and interested person in the asset of the said deceased may appearance on the day.

Given under my hand and the seal of this court this the 29th Day of March 2012 at Bangalore.

By order of the Court.

Assistant Registrar,

City Civil Court, Bangalore.

P.D. 43

BEFORE THE III ADDITIONAL PRINCIPAL JUDGE FAMILY COURT IN BANGALORE CITY

G & W.C. No.219/2011.

Between:

Shri. Jayadevappa B.N.S/o Late Sri. Nanjundappa T.B.
Aged about 44 years,
Occupation: Jr. Health Assistant,
Preliminary Health Centre, Nagasandra Post,
Thippenahalli, Residing at No. 18,
1st Cross, Magadi Road, Keshavanagar, Bangalore-23,
But presently Residing at No. 14, 4th Cross,
Right Side, Magadi Road, Bangalore.560023. **…………PETITIONER**

AND:

NIL **………RESPONDENTS**

TO ALL WHOM IT MAY CONCERN

Take notice that on 15th day of September 2011, Shri. Jayadevappa B.N. S/o Late Sri. Nanjundappa T.B. Aged about 44 years, Occupation: Jr. Health Assistant, Preliminary Health Centre, Nagasandra Post, Thippenahalli, Residing at No. 18, 1st Cross, Magadi Road, Keshavanagar, Bangalore-23, but presently Residing at No. 14, 4th Cross, Right Side, Magadi Road, Bangalore-560 023, presented an Application/petition to this Court praying that he may be appointed or declared to be the guardian of the person and property of Kumar Bhuvan.B. U minor son of late: Sri B.N. Udayashankar and Late: Smt. M.R. Girija and for other reliefs and that Thursday the 24th of May 2012 has been fixed for the hearing of the application/petition; and that if you desire to oppose the said application/petition or to apply for the appointment of any person other than the above said applicant/ petitioner, as guardian of the person and property of the said minor, you must appear on the said 24th of May 2012 at 11.00 A.M. in this court in person or by a duly authorized pleader and be prepared to adduce any documentary and oral evidence upon which you rely, and that in default of your appearance, the said application/petition may be heard and determined in your absence. Any relation or friend of the said minor may appear and be heard upon the said application/petition, and may inspect and obtain a copy of the petition and it shall not be necessary to present any petition for this purpose.

Given under my hand and seal of this court this…… day of April 2012.

By order of the Court.
Sheristedar,
Family Court, Bangalore.

P.D. 44

ಕೈಗಾರಿಕೆ ಮತ್ತು ವಾಣಿಜ್ಯ ನಿರ್ದೇಶನಾಲಯ, ನಂ.49, ಖನಿಜ ಭವನ, ಡಿ. ದೇವರಾಜ್ ಅರಸು ರಸ್ತೆ, ಬೆಂಗಳೂರು–560 001.

ಪ್ರಕಟಣೆ ಅಧಿಸೂಚನೆ ಸಂಖ್ಯೆ. ಆಡಳಿತ/ಸಿಬ್ಬಂದಿ/ಇ5/35/2010–11 ದಿನಾಂಕ 3–7–2010

ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಲ್ಲಿ ಪರಿಶಿಷ್ಟ ಜಾತಿಯ ಮಹಿಳೆ ಹಾಗೂ ಗ್ರಾಮೀಣ ಅಭ್ಯರ್ಥಿಗಳಿಗೆ ಮೀಸಲಾದ ಶೀಘ್ರಲಿಪಿಗಾರರ ಎರಡು ಹುದ್ದೆಯನ್ನು ಬ್ಯಾಕ್‌ಲಾಗ್ ಎಂದು ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಗುರುತಿಸಲಾಗಿರುತ್ತದೆ. ಅದರಂತೆ, ಈ ಕಛೇರಿ ಅಧಿಸೂಚನೆ ಸಂಖ್ಯೆ. ಆಡಳಿತ/ಸಿಬ್ಬಂದಿ/ಇ5/35/2010–11 ದಿನಾಂಕ 3–7–2010 ರ ಪ್ರಕಟಣೆಗೆ ಪ್ರತಿಯಾಗಿ ಸ್ವೀಕೃತಿಯಾದ ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಲಾಗಿದೆ.

ಸದರಿ ಅರ್ಜಿಗಳಲ್ಲಿ, ಪರಿಶಿಷ್ಟಜಾತಿಯ ಗ್ರಾಮೀಣ ಅಭ್ಯರ್ಥಿಗಳಿಂದ ಅರ್ಜಿಗಳು ಸ್ವೀಕೃತವಾಗದ ಕಾರಣ, ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ರವರಿಂದ ಸ್ಪಷ್ಟೀಕರಣ ಕೋರಲಾದ ಮೇರೆಗೆ, ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ರವರು ಸರ್ಕಾರದ ಪತ್ರ ಸಂಖ್ಯೆ.ಸಿಆಸುಇ 1132 ಸೇನಿಎ 2011 ದಿನಾಂಕ 29–12–2011 ನ್ನು ಲಗತ್ತಿಸಿ, ಅದರಂತೆ ಕ್ರಮ ವಹಿಸಲು ತಿಳಿಸಿರುತ್ತಾರೆ. ಸದರಿ ಪತ್ರದ ಸ್ಪಷ್ಟೀಕರಣ ಕೆಳಗಿನಂತಿರುತ್ತದೆ:

"ಸಮತಳ ಮೀಸಲಾತಿಗೆ ಸಂಬಂಧಿಸಿದಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಿಂದ ಹೊರಡಿಸಲಾದ ಆದೇಶಗಳಲ್ಲಿ ಮಹಿಳೆಯರಿಗೆ ಮತ್ತು ಮಾಜಿ ಸೈನಿಕರಿಗೆ ಮೀಸಲಿರಿಸಿದ ರಿಕ್ತ ಸ್ಥಾನಗಳಿಗೆ ಅರ್ಹ ಮಹಿಳಾ ಅಭ್ಯರ್ಥಿಗಳು ಅಥವಾ ಮಾಜಿ ಸೈನಿಕ ಅಭ್ಯರ್ಥಿಗಳು ಲಭ್ಯವಾಗದೇ ಇದ್ದಲ್ಲಿ ಅಂತಹ ರಿಕ್ತ ಸ್ಥಾನಗಳನ್ನು ಆಯಾಯ ವರ್ಗಕ್ಕೆ (verticial reservation) ಸೇರಿದ ಇತರೆ ಅರ್ಹ ಅಭ್ಯರ್ಥಿಗಳಿಂದ ಭರ್ತಿ ಮಾಡಬಹುದೆಂದು ಹೇಳಲಾಗಿದೆ. ಆದರೆ, ಇತರೆ ಸಮತಳ ಮೀಸಲಾತಿಗಳಾದ ಗ್ರಾಮೀಣ ಅಭ್ಯರ್ಥಿ, ಕನ್ನಡ ಮಾಧ್ಯಮ ಅಭ್ಯರ್ಥಿ, ಯೋಜನಾ ನಿರ್ವಸಿತ ಅಭ್ಯರ್ಥಿಗಳ ಸಂಬಂಧದಲ್ಲಿ

ಇಂತಹ ಅವಕಾಶಗಳನ್ನು ಕಲ್ಪಿಸಿರುವುದಿಲ್ಲ. ಒಂದು ವೇಳೆ, ಈ ಗುಂಪುಗಳಿಗೆ ಸೇರಿದ ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದೇ ಇದ್ದಲ್ಲಿ ಅದೇ ವರ್ಗ (verticial reservation) ಕ್ಕೆ ಸೇರಿದ ಇತರೆ ಅಭ್ಯರ್ಥಿಗಳಿಂದ ಆ ಖಾಲಿ ಹುದ್ದೆಗಳನ್ನು ಭರ್ತಿ ಮಾಡಬಹುದೆಂದು ತಿಳಿಸಿರುತ್ತಾರೆ."

ಮೇಲೆ ತಿಳಿಸಿದಂತೆ ಹಾಗೂ ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 97 ಸೇನೆನಿ 2000 ದಿನಾಂಕ 22–11–2002 ರನ್ವಯ ರೋಸ್ಟರ್ ಬಿಂಧುವಿನಂತೆ ಇಲಾಖೆಯಲ್ಲಿ ಗುರುತಿಸಲಾದ ಹಾಗೂ ಬ್ಯಾಕ್‌ಲಾಗ್ ಹುದ್ದೆಗಳ ನೇಮಕಾತಿಯಲ್ಲಿ 29 ವರ್ಷಕ್ಕಿಂತ ಮೇಲ್ಪಟ್ಟ ಅಭ್ಯರ್ಥಿಗಳಿಗೆ ಆಧ್ಯತೆ ನೀಡಬೇಕಾಗಿರುವುದರಿಂದ ಎರಡು ಶೀಘ್ರಲಿಪಿಗಾರರ ಬ್ಯಾಕ್‌ಲಾಗ್ ಹುದ್ದೆಯನ್ನು ಮೆರಿಟ್ ಆಧಾರದ ಮೇಲೆ ಹಾಗೂ ವಯೋಮಿತಿ ಆಧಾರದ ಮೇರೆಗೆ ಪರಿಶಿಷ್ಟ ಜಾತಿಯ ಒಂದು ಮಹಿಳೆ ಹಾಗೂ ಒಂದು ಪರಿಶಿಷ್ಟ ಜಾತಿಯ ಸಾಮಾನ್ಯ ಅಭ್ಯರ್ಥಿಗಳನ್ನು ಶೀಘ್ರಲಿಪಿಗಾರರ ಎರಡು ಬ್ಯಾಕ್‌ಲಾಗ್ ಹುದ್ದೆಗಳಿಗೆ ಆಯ್ಕೆ/ಕಾಯ್ದಿರಿಸಿರುವ ಪಟ್ಟಿಯನ್ನು ತಯಾರಿಸಿದೆ. ವಿವರಗಳು ಕೆಳಕಂಡಂತಿರುತ್ತದೆ.

ಆಯ್ಕೆ ಪಟ್ಟಿ ವಿವರ

ಕ್ರಮ ಸಂಖ್ಯೆ	ರೋಸ್ಟರ್ ಬಿಂಧು	ಹೆಸರು ಮತ್ತು ವಿಳಾಸ	ಜನ್ಮ ದಿನಾಂಕ	ವಿದ್ಯಾರ್ಹತೆ	ಶೇಕಡವಾರು ಒಟ್ಟು
01	ಪರಿಶಿಷ್ಟ ಜಾತಿ (ಮಹಿಳೆ)	ಶ್ರೀಮತಿ ಪಾಚಮ್ಮ, c/o. ಎ.ಆರ್.ಕೃಷ್ಣ, ನಂ.11, 8ನೇ ಬ್ಲಾಕ್, ಆನಂದರಾವ್ ಪೊಲೀಸ್ ಬಡಾವಣೆ, ಬೆಂಗಳೂರು–560 001.	24–5–1976	ಎಸ್‌ಎಸ್‌ಎಲ್‌ಸಿ ಮತ್ತು ಕನ್ನಡ ಪ್ರೌಢ ದರ್ಜೆ ಬೆರಳಚ್ಚು ಮತ್ತು ಶೀಘ್ರಲಿಪಿ	186.66
02	ಪರಿಶಿಷ್ಟ ಜಾತಿ (ಸಾಮಾನ್ಯ)	ಶ್ರೀ ಮಹೇಶ್, s/o. ರೇವಣ್ಣ ಸಿದ್ದಪ್ಪ, ಎಲ್.ಐ.ಜಿ–4, 2ನೇ ಹಂತ, ಆದರ್ಶನಗರ, ಗುಲ್ಬರ್ಗ	25–6–1975	ಎಸ್‌ಎಸ್‌ಎಲ್‌ಸಿ ಮತ್ತು ಕನ್ನಡ ಪ್ರೌಢ ದರ್ಜೆ ಬೆರಳಚ್ಚು ಮತ್ತು ಶೀಘ್ರಲಿಪಿ	203.16

ಕಾಯ್ದಿರಿಸಿರುವ ಪಟ್ಟಿ ವಿವರ

ಕ್ರಮ ಸಂಖ್ಯೆ	ರೋಸ್ಟರ್ ಬಿಂಧು	ಹೆಸರು ಮತ್ತು ವಿಳಾಸ	ಜನ್ಮ ದಿನಾಂಕ	ವಿದ್ಯಾರ್ಹತೆ	ಶೇಕಡವಾರು ಒಟ್ಟು
01	ಪರಿಶಿಷ್ಟ ಜಾತಿ (ಮಹಿಳೆ)	ಶ್ರೀಮತಿ ಮಹಾಲಕ್ಷ್ಮಿ.ಎನ್, ನಂ.61, 2ನೇ ಮುಖ್ಯ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು–560 020	1–11–1979	ಎಸ್‌ಎಸ್‌ಎಲ್‌ಸಿ ಮತ್ತು ಕನ್ನಡ ಪ್ರೌಢ ದರ್ಜೆ ಬೆರಳಚ್ಚು	183.35
02	ಪರಿಶಿಷ್ಟ ಜಾತಿ (ಸಾಮಾನ್ಯ)	ಶ್ರೀ ಕೃಷ್ಣ.ಹೆಚ್.ಟಿ, ಹಾರೋಹಳ್ಳಿ, ಪಾಂಡವಪುರ ಅಂಚೆ ಮತ್ತು ತಾಲ್ಲೂಕು, ಮಂಡ್ಯ–571434	1–6–1974	ಎಸ್‌ಎಸ್‌ಎಲ್‌ಸಿ ಮತ್ತು ಕನ್ನಡ ಪ್ರೌಢ ದರ್ಜೆ ಬೆರಳಚ್ಚು ಮತ್ತು ಶೀಘ್ರಲಿಪಿ	170.66

ಈ ಬಗ್ಗೆ ಯಾವುದಾದರು ಆಕ್ಷೇಪಣೆಗಳಿದ್ದಲ್ಲಿ, ಕರ್ನಾಟಕ ರಾಜ್ಯ ಪತ್ರದಲ್ಲಿ ಈ ಪ್ರಕಟಣೆ ಹೊರಡಿಸಿದ ದಿನಾಂಕದಿಂದ 30 ದಿನಗಳೊಳಗಾಗಿ ಅಭ್ಯರ್ಥಿಗಳು ಸೂಕ್ತ ದಾಖಲಾತಿಗಳೊಂದಿಗೆ ಅಪರ ನಿರ್ದೇಶಕರು (ಆಡಳಿತ), ಕೈಗಾರಿಕೆ ಮತ್ತು ವಾಣಿಜ್ಯ ನಿರ್ದೇಶನಾಲಯ, ನಂ.49, ಖನಿಜ ಭವನ, ಸೌತ್ ಬ್ಲಾಕ್, ಡಿ.ದೇವರಾಜು ಅರಸು ರಸ್ತೆ, ಬೆಂಗಳೂರು ರವರಿಗೆ ಸಲ್ಲಿಸತಕ್ಕದ್ದು. ಅವಧಿ ಮೀರಿ ಬಂದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ. ಅಭ್ಯರ್ಥಿಯ ನೇಮಕಾತಿಯು, ಮೇಲಿನ ಷರತ್ತುಗಳು ಮತ್ತು ಶೀಘ್ರಲಿಪಿಗಾರರ ಹುದ್ದೆಗೆ ನಿಗದಿಪಡಿಸಿರುವ ಅರ್ಹತೆಗಳಿಗೆ ಅನ್ವಯಿಸುವಂತೆ, ಮೂಲ ಅಂಕಪಟ್ಟಿಗಳು, ಜಾತಿ ಪ್ರಮಾಣ ಪತ್ರ ಮತ್ತು ಇತರೆ ಮೂಲ ದಾಖಲಾತಿ ಪತ್ರಗಳನ್ನು ಸಲ್ಲಿಸುವ ಷರತ್ತಿಗೊಳಪಟ್ಟಿರುತ್ತದೆ.

ಮೇಲ್ಕಂಡ ಷರತ್ತಿಗೊಳಪಟ್ಟಂತೆ ಆಯ್ಕೆ ಪಟ್ಟಿ ಮತ್ತು ಕಾಯ್ದಿರಿಸಿದ ಪಟ್ಟಿಯಲ್ಲಿನ ಅಭ್ಯರ್ಥಿಗಳು ನೇಮಕಾತಿಯ ಹಕ್ಕೆಂದು ಪರಿಗಣಿಸುವಂತಿಲ್ಲ.

ಅಪರ ನಿರ್ದೇಶಕರು (ಆಡಳಿತ)

ಪಿ.ಆರ್. 68

ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ,

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ,

ತಳಮಹಡಿ, ಸಿಟಿ ಸಿವಿಲ್ ನ್ಯಾಯಾಲಯ ಸಂಕೀರ್ಣ, ಬೆಂಗಳೂರು – 560 009.

ನೇಮಕಾತಿ ಅಧಿಸೂಚನೆ

ಸಂಖ್ಯೆ : ಎಡಿಎಂ/147/2011 ದಿನಾಂಕ: 30.03.2012

ವಿಷಯ: ಶೀಘ್ರಲಿಪಿಗಾರರ (Stenographer) ಹುದ್ದೆಗಳ ನೇಮಕಾತಿ– ಕಾಲಾವಕಾಶ ವಿಸ್ತರಣೆ– ಬಗ್ಗೆ

ಉಲ್ಲೇಖ: ಈ ಕಛೇರಿಯ ದಿನಾಂಕ 09.02.2012 ರ ಅಧಿಸೂಚನೆ ಸಂಖ್ಯೆ : ಎಡಿಎಂ/147/2011

ಉಲ್ಲೇಖದಲ್ಲಿ ನಮೂದಿಸಿರುವ ಅಧಿಸೂಚನೆ ಅನುಸಾರ ಈ ಕಛೇರಿಯಲ್ಲಿ ಖಾಲಿ ಇರುವ 27 ಶೀಘ್ರಲಿಪಿಗಾರರ ಹುದ್ದೆಗಳ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು.

ಸದರಿ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವನ್ನು 31.05.2012 ವರೆಗೆ ವಿಸ್ತರಿಸಲಾಗಿದೆ.

ನಿಗದಿಪಡಿಸಿದ ಅರ್ಜಿ ನಮೂನೆಯ ಬೆರಳಚ್ಚು ಪ್ರತಿ : ಗಣಕೀಕೃತ ಪ್ರತಿಯಲ್ಲಿಯೇ ಅಭ್ಯರ್ಥಿಗಳು **ತಮ್ಮ ಸ್ವಂತ ಕೈಬರಹದಿಂದ** ಎಲ್ಲಾ ಅಂಕಣಗಳನ್ನು ಜಾಗರೂಕತೆಯಿಂದ ಭರ್ತಿ ಮಾಡಿ ಸಲ್ಲಿಸತಕ್ಕದ್ದು.

ಅರ್ಜಿ ಸಲ್ಲಿಸಲು ನಿಗದಿಪಡಿಸಲಾದ ಕೊನೆಯ ದಿನಾಂಕ (ವಿಸ್ತರಿಸಲಾಗಿರುವುದು)	**31.05.2012 ಸಂಜೆ 4.00 ಗಂಟೆ**

(1) ಅರ್ಜಿ ಸಲ್ಲಿಸಬೇಕಾದ ವಿಳಾಸ : **ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**
ಬೆಂಗಳೂರು ಗ್ರಾಮಾಂತರ ಜಿಲ್ಲೆ,
ತಳಮಹಡಿ,
ನಗರ ಸಿವಿಲ್ ನ್ಯಾಯಾಲಯಗಳ ಸಂಕೀರ್ಣ,
ಬೆಂಗಳೂರು–560009

(2) ಹುದ್ದೆಗಳ ಸಂಖ್ಯೆ ಮತ್ತು ವರ್ಗೀಕರಣ : 27 (ಇಪ್ಪತ್ತೇಳು) ಹುದ್ದೆಗಳು

ವರ್ಗೀಕರಣ	ಇತರೆ	ಮಹಿಳಾ	ಗ್ರಾಮೀಣ	ಮಾಜಿ ಸೈನಿಕ	ಕ.ಮಾ.	ಯೋಜನ ನಿರಾಶ್ರಿತ	ಅಂಗವಿಕಲ	ಒಟ್ಟು
ಪ.ಜಾ	01	01	02	–	–	–	–	04
ಪ. ಪಂ.	01	–	–	–	–	–	–	01
ಪ್ರವರ್ಗ .1	01 (ಬ್ಯಾಕ್‌ಲಾಗ್)	01	–	–	–	–	–	02
ಪ್ರವರ್ಗ .2ಎ	01	01	02	–	–	–	–	04
ಪ್ರವರ್ಗ .2ಬಿ	01	–	–	–	–	–	–	01
ಪ್ರವರ್ಗ .3ಎ	–	01	–	–	–	–	–	01
ಪ್ರವರ್ಗ .3ಬಿ	–	01	–	–	–	–	–	01
ಸಾಮಾನ್ಯ ಅರ್ಹತೆ	02	04	03	01	–	01	02	13
ಒಟ್ಟು	07	09	07	01	–	01	02	27

ಹುದ್ದೆಗಳ ಸಂಖ್ಯೆ ಮತ್ತು ವರ್ಗೀಕರಣವು ಯಾವುದೇ ಮುನ್ಸೂಚನೆ ಇಲ್ಲದೆ ಬದಲಾವಣೆಗೆ ಒಳಪಟ್ಟಿರುತ್ತದೆ.

(3) ವೇತನ ಶ್ರೇಣಿ – ರೂ. 7275–175–7800–200–8600–225–9500–250–10500–300–12300–350–13350 ಹಾಗೂ ಇತರೆ ಭತ್ಯೆಗಳು

(4) **ಶೈಕ್ಷಣಿಕ ವಿದ್ಯಾರ್ಹತೆ :**

(ಅ) ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣ ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರಬೇಕು

(ಆ) ಕನ್ನಡ ಮತ್ತು ಇಂಗ್ಲಿಷ್ ಪ್ರೌಢದರ್ಜೆಯ ಶೀಘ್ರಲಿಪಿ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರಬೇಕು ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರಬೇಕು

(ಇ) ಕನ್ನಡ ಮತ್ತು ಇಂಗ್ಲಿಷ್ ಪ್ರೌಢದರ್ಜೆಯ ಬೆರಳಚ್ಚು ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರಬೇಕು ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರಬೇಕು

(ಈ) ಕಂಪ್ಯೂಟರ್ ಜ್ಞಾನ ಇರುವವರಿಗೆ ಆದ್ಯತೆ ನೀಡಲಾಗುವುದು

(5) **ವಯೋಮಿತಿ:**

ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂತೆ:

ಕನಿಷ್ಠ ವಯೋಮಿತಿ : 18 ವರ್ಷ

ಗರಿಷ್ಠ ವಯೋಮಿತಿ :	ಸಾಮಾನ್ಯ ವರ್ಗ	– 35 ವರ್ಷ
	ಪ್ರವರ್ಗ 2ಎ : 2 ಬಿ : 3ಎ : 3ಬಿ	– 38 ವರ್ಷ
	ಪ.ಜಾ : ಪ.ಪಂ. : ಪ್ರವರ್ಗ–1	– 40 ವರ್ಷ

ಸರ್ಕಾರಿ ಸೇವೆಯಲ್ಲಿರುವವರಿಗೆ, ವಿಧವೆಯರಿಗೆ, ಮಾಜಿ ಸೈನಿಕರಿಗೆ ಹಾಗೂ ಅಂಗವಿಕಲರಿಗೆ ನಿಯಮಾನುಸಾರ ವಯೋಮಿತಿಯಲ್ಲಿ ಸಡಿಲಿಕೆ ನೀಡಲಾಗುವುದು.

ಅರ್ಜಿ ನಮೂನೆ ಮತ್ತು ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯ ಸೂಚನಾಫಲಕವನ್ನು ಗಮನಿಸುವುದು.

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

ಪಿ.ಆರ್. 70

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ಕಛೇರಿ, ಚಾಮರಾಜನಗರ

ಅಧಿಸೂಚನೆ ಸಂಖ್ಯೆ. ಎಡಿಎಮ್ಎನ್ / 848/2012 ದಿನಾಂಕ:12.04.2012

ವಿಷಯ: ಚಾಮರಾಜನಗರ ಜಿಲ್ಲಾ ನ್ಯಾಯಾಂಗ ಘಟಕದಲ್ಲಿ ಖಾಲಿ ಇರುವ ಶೀಘ್ರಲಿಪಿಗಾರ ಮತ್ತು ಬೆರಳಚ್ಚುಗಾರರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಬಗ್ಗೆ.

ಉಲ್ಲೇಖ: 1. ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯದ ಅನುಮತಿ ಪತ್ರ ಸಂಖ್ಯೆ: No.LCA-II.36/2003 ದಿನಾಂಕ 23.06.2011 ಮತ್ತು 24.10.2011.

2. ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯದ ಅನುಮತಿ ಪತ್ರ ಸಂಖ್ಯೆ: No. LCA-II.54/2011 ದಿನಾಂಕ 01.10.2011ರ ಜೊತೆ ಲಗತ್ತಿಸಿರುವ ಸರ್ಕಾರದ ಆದೇಶ ಸಂಖ್ಯೆ: LAW 186 LAC 2011, ದಿ.21.09.2011.

3. ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯದ ಅನುಮತಿ ಪತ್ರ ಸಂಖ್ಯೆ: No.LCA-II.54/2011 ದಿನಾಂಕ 09.02.2012.

ಮೇಲ್ಕಂಡ ಅಧಿಸೂಚನೆ ಅನ್ವಯ ಚಾಮರಾಜನಗರದ ಜಿಲ್ಲಾ ನ್ಯಾಯಾಂಗ ಘಟಕದ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಹಾಗೂ ಅಧೀನ ನ್ಯಾಯಾಲಯಗಳಲ್ಲಿ ಖಾಲಿ ಇರುವ ಶೀಘ್ರಲಿಪಿಗಾರರ 6 ಹುದ್ದೆಗಳಿಗೆ ಮತ್ತು ಬೆರಳಚ್ಚುಗಾರರ 1 ಹುದ್ದೆಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ನಿಗದಿಪಡಿಸಿದ ಅರ್ಜಿ ನಮೂನೆಯ ಬೆರಳಚ್ಚು ಪ್ರತಿ / ಗಣಕೀಕೃತ ಪ್ರತಿಯಲ್ಲಿಯೇ ಅಭ್ಯರ್ಥಿಗಳು ತಮ್ಮ ಸ್ವಂತ ಕೈಬರಹದಿಂದ ಎಲ್ಲಾ ಅಂಕಣಗಳನ್ನು ಜಾಗರೂಕತೆಯಿಂದ ಭರ್ತಿ ಮಾಡಿ ದಿನಾಂಕ: 16.05.2012 ರಂದು ಸಂಜೆ 5 ಘಂಟೆಯೊಳಗೆ ಈ ಕಛೇರಿಗೆ ಸಲ್ಲಿಸತಕ್ಕದ್ದು.

ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ:16.05.2012 **ರ ಸಂಜೆ** 5.00 **ಘಂಟೆ**

ಅರ್ಜಿ ಸಲ್ಲಿಸಬೇಕಾದ ವಿಳಾಸ : ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಾಮರಾಜನಗರ.

I. ಹುದ್ದೆಯ ಪದನಾಮ : ಶೀಘ್ರಲಿಪಿಗಾರರು

ಖಾಲಿ ಹುದ್ದೆಗಳ ಸಂಖ್ಯೆ : 06

ವೇತನ ಶ್ರೇಣಿ : 7275–175–7800–200–8600–225–9500–250–10500–300–12300–350–13350.

ವರ್ಗೀಕರಣ	ಇತರೆ	ಗ್ರಾಮೀಣ	ಮಹಿಳೆ	ಅಂಗ ವಿಕಲ	ಒಟ್ಟು
ಪರಿಶಿಷ್ಟ ಪಂಗಡ	1 (ಬ್ಯಾಕ್‌ಲಾಗ್)	–	–	–	1
ಪ್ರವರ್ಗ – II (ಎ)	1	–	–	–	1
ಪ್ರವರ್ಗ – II (ಬಿ)	1	–	–	–	1
ಸಾಮಾನ್ಯ ವರ್ಗ	–	1	1	1*	3
ಒಟ್ಟು	3	1	1	1	6

* **ಚಲನವಲನ ವೈಕಲ್ಯವುಳ್ಳ ಅಂಗವಿಕಲ ಅಭ್ಯರ್ಥಿಗಳು**

ಶೈಕ್ಷಣಿಕ ವಿದ್ಯಾರ್ಹತೆ:

1. ಎಸ್‌ಎಸ್‌ಎಲ್‌ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರತಕ್ಕದ್ದು.
2. ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ವತಿಯಿಂದ ನಡೆಸುವ ಹಿರಿಯ ದರ್ಜೆ (senior grade) ಕನ್ನಡ ಮತ್ತು ಆಂಗ್ಲ ಭಾಷೆಗಳ ಬೆರಳಚ್ಚು ವಿಷಯಗಳಲ್ಲಿ ತೇರ್ಗಡೆ ಹೊಂದಿರಬೇಕು ಅಥವಾ ತತ್ಸಮಾನ ವಿದ್ಯಾರ್ಹತೆ.
3. ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ವತಿಯಿಂದ ನಡೆಸುವ ಹಿರಿಯ ದರ್ಜೆ (senior grade) ಕನ್ನಡ ಮತ್ತು ಆಂಗ್ಲ ಭಾಷೆಗಳ ಶೀಘ್ರಲಿಪಿ ವಿಷಯಗಳಲ್ಲಿ ತೇರ್ಗಡೆ ಹೊಂದಿರಬೇಕು ಅಥವಾ ತತ್ಸಮಾನ ವಿದ್ಯಾರ್ಹತೆ.

ಆಯ್ಕೆ ವಿಧಾನ :

ನಿಗದಿತ ಶೈಕ್ಷಣಿಕ ಅರ್ಹತಾ ಪರೀಕ್ಷೆಗಳಲ್ಲಿ ಗಳಿಸಿರುವ ಒಟ್ಟು ಶೇಕಡಾವಾರು ಅಂಕಗಳು ಮತ್ತು ನಿಮಿಷ ಒಂದಕ್ಕೆ 120 ಪದಗಳ ದರದಲ್ಲಿ 5 ನಿಮಿಷಗಳ ಉಕ್ತಲೇಖನವನ್ನು ತೆಗೆದುಕೊಂಡು, ಉಕ್ತಲೇಖನವನ್ನು 45 ನಿಮಿಷಗಳಲ್ಲಿ ಅನುಲಿಪಿ ಮಾಡುವ ಅರ್ಹತಾ ಪರೀಕ್ಷೆಯಲ್ಲಿ ಗಳಿಸುವ ಅಂಕಗಳು ಮತ್ತು ಸಂದರ್ಶನದಲ್ಲಿ ಗಳಿಸುವ ಅಂಕಗಳ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು.

ಟಿಪ್ಪಣಿ: ಅರ್ಹತಾ ಪರೀಕ್ಷೆಯು ಗರಿಷ್ಠ 100 ಅಂಕಗಳನ್ನು ಒಳಗೊಂಡಿದ್ದು, ಅದರಲ್ಲಿ ತೇರ್ಗಡೆಯಾಗಲು ಕನಿಷ್ಠ 50 ಅಂಕಗಳನ್ನು ಪಡೆಯಬೇಕು ಮತ್ತು ಸಂದರ್ಶನವು 05 ಅಂಕಗಳನ್ನೊಳಗೊಂಡಿರುತ್ತದೆ.

ಪರಿಶಿಷ್ಟ ಪಂಗಡಕ್ಕೆ (ಬ್ಯಾಕ್‌ಲಾಗ್) ಮೀಸಲಾದ ಹುದ್ದೆಯನ್ನು ಹೊರತುಪಡಿಸಿ, ಇನ್ನುಳಿದ ವರ್ಗಗಳ ಮೀಸಲಾತಿಯಡಿಯಲ್ಲಿ, ಅರ್ಹ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ, ಆ ಹುದ್ದೆಗಳನ್ನು ಸಾಮಾನ್ಯ ವರ್ಗದ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು.

II. **ಹುದ್ದೆಯ ಪದನಾಮ : ಬೆರಳಚ್ಚುಗಾರರು**

ಖಾಲಿ ಹುದ್ದೆಗಳ ಸಂಖ್ಯೆ : 01

ವೇತನ ಶ್ರೇಣಿ : 5800–100–6000–125–6500–150–7100–175–7800–200–8600–225–9500–250–10500

ವರ್ಗೀಕರಣ	ಅಂಗ ವಿಕಲ	ಒಟ್ಟು
ಪರಿಶಿಷ್ಟ ಜಾತಿ	1	1

ಶೈಕ್ಷಣಿಕ ವಿದ್ಯಾರ್ಹತೆ:

1. ಎಸ್‌ಎಸ್‌ಎಲ್‌ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರತಕ್ಕದ್ದು.
2. ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ವತಿಯಿಂದ ನಡೆಸುವ ಹಿರಿಯ ದರ್ಜೆ (senior grade) ಕನ್ನಡ ಮತ್ತು ಆಂಗ್ಲ ಭಾಷೆಗಳ ಬೆರಳಚ್ಚು ವಿಷಯಗಳಲ್ಲಿ ತೇರ್ಗಡೆ ಹೊಂದಿರಬೇಕು ಅಥವಾ ತತ್ಸಮಾನ ವಿದ್ಯಾರ್ಹತೆ.

ಆಯ್ಕೆ ವಿಧಾನ :

ಅರ್ಹತಾ ಪರೀಕ್ಷೆಗಳಲ್ಲಿ ಗಳಿಸಿರುವ ಒಟ್ಟು ಶೇಕಡಾವಾರು ಅಂಕಗಳು ಮತ್ತು 15 ನಿಮಿಷಗಳ ಉಕ್ತಲೇಖನದಲ್ಲಿ ಕೊಡುವ ವಿಷಯವನ್ನು ಬೆರಳಚ್ಚು ಮಾಡುವ ಅರ್ಹತಾ ಪರೀಕ್ಷೆಯಲ್ಲಿ ಗಳಿಸುವ ಅಂಕಗಳು ಮತ್ತು ಸಂದರ್ಶನದಲ್ಲಿ ಗಳಿಸುವ ಅಂಕಗಳ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು.

ಟಿಪ್ಪಣಿ: ಅರ್ಹತಾ ಪರೀಕ್ಷೆಯು ಗರಿಷ್ಠ 100 ಅಂಕಗಳನ್ನು ಒಳಗೊಂಡಿದ್ದು, ಅದರಲ್ಲಿ ತೇರ್ಗಡೆಯಾಗಲು ಕನಿಷ್ಠ 50 ಅಂಕಗಳನ್ನು ಪಡೆಯಬೇಕು ಮತ್ತು ಸಂದರ್ಶನವು 05 ಅಂಕಗಳನ್ನೊಳಗೊಂಡಿರುತ್ತದೆ.

ಮೇಲ್ಕಂಡ ಹುದ್ದೆಗಳನ್ನು ಕರ್ನಾಟಕ ಅಧೀನ ನ್ಯಾಯಾಲಯಗಳು (ಲಿಪಿಕ ಮತ್ತು ಇತರೆ ಹುದ್ದೆಗಳು) (ನೇಮಕಾತಿ) (ತಿದ್ದುಪಡಿ) ನಿಯಮಗಳು 2007ರ ಅನ್ವಯ ನೇರ ನೇಮಕಾತಿಯ ಮೂಲಕ ಆಯ್ಕೆ ಮಾಡಲಾಗುವುದು ಹಾಗೂ ಕಾಲಕಾಲಕ್ಕೆ ಚಾಲ್ತಿಯಲ್ಲಿರುವ ನಿಯಮಾನುಸಾರ ಆಯ್ಕೆ ಮಾಡಲಾಗುವುದು.

ಪರಿಶಿಷ್ಟ ಜಾತಿ (ಅಂಗವಿಕಲ) ಹುದ್ದೆಗೆ ನಿಗದಿಪಡಿಸಿದ ಮೀಸಲಾತಿಯಡಿಯಲ್ಲಿ ಅರ್ಹ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ, ನಿಯಮದಂತೆ ಅದೇ ವರ್ಗದ ಇತರೆ ಅಭ್ಯರ್ಥಿಗಳನ್ನು ಪರಿಗಣಿಸಲಾಗುವುದು.

ಪರಿವೀಕ್ಷಣಾ ಅವಧಿ : ಆಯ್ಕೆಯಾದ ಅಭ್ಯರ್ಥಿಗಳನ್ನು ನೇಮಕಾತಿ ನಿಯಮಗಳಂತೆ 2 ವರ್ಷಗಳ ಕಾಲ ಪರಿವೀಕ್ಷಣಾ ಅವಧಿಯಲ್ಲಿಡಲಾಗುವುದು. ಈ ಅವಧಿಯಲ್ಲಿ ಅಭ್ಯರ್ಥಿಗಳು ಅವರುಗಳ ಹುದ್ದೆಗೆ ನಿಗದಿಪಡಿಸಿರುವ ಇಲಾಖಾ ಪರೀಕ್ಷೆಗಳಲ್ಲಿ ಮತ್ತು ಕನ್ನಡ ಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕು.

ವಯೋಮಿತಿ :

1. ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅಭ್ಯರ್ಥಿಯು ಕನಿಷ್ಟ 18 ವರ್ಷ ವಯಸ್ಸನ್ನು ಪೂರೈಸಿರತಕ್ಕದ್ದು ಮತ್ತು ಗರಿಷ್ಠ ವಯಸ್ಸನ್ನು ಮೀರಿರಕೂಡದು.

ಗರಿಷ್ಟ ವಯೋಮಿತಿ :

ಸಾಮಾನ್ಯ ವರ್ಗ	35 ವರ್ಷ ಮೀರಿರಬಾರದು
ಪ್ರವರ್ಗ 2ಎ, 2ಬಿ, 3ಎ, 3ಬಿ	38 ವರ್ಷ ಮೀರಿರಬಾರದು
ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ / ಪ್ರವರ್ಗ – 1	40 ವರ್ಷ ಮೀರಿರಬಾರದು

2. ಸರ್ಕಾರಿ ಸೇವೆಯಲ್ಲಿರುವವರಿಗೆ, ವಿಧವೆಯರಿಗೆ, ಮಾಜಿ ಸೈನಿಕರಿಗೆ ಹಾಗೂ ಅಂಗವಿಕಲರಿಗೆ ನಿಯಮಾನುಸಾರ ವಯೋಮಿತಿಯಲ್ಲಿ ಸಡಿಲಿಕೆ ನೀಡಲಾಗುವುದು (ಈ ಬಗ್ಗೆ ಮೀಸಲಾತಿ ಕೋರಿದ್ದಲ್ಲಿ ಪ್ರಮಾಣಪತ್ರ ಸಲ್ಲಿಸಬೇಕು).
3. ಜನ್ಮ ದಿನಾಂಕವನ್ನು ನಮೂದಿಸಿರುವ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯ ಪ್ರಮಾಣ ಪತ್ರ / ವರ್ಗಾವಣೆ ಪ್ರಮಾಣ ಪತ್ರ / ಜನನ ದಿನಾಂಕವನ್ನು ತೋರಿಸುವ ಸಂಚಿತ ದಾಖಲೆಯ ಉದ್ಧೃತ ಭಾಗದ ಪ್ರತಿ ಸಲ್ಲಿಸಬೇಕು.
4. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ – 1, 2ಎ, 2ಬಿ, 3ಎ, 3ಬಿ, ಗಳ ಮೀಸಲಾತಿ ಪ್ರಮಾಣಪತ್ರಗಳನ್ನು ಪ್ರಸ್ತುತ ಚಾಲ್ತಿಯಲ್ಲಿರುವ ನಮೂನೆಗಳಲ್ಲಿ ಸಲ್ಲಿಸಬೇಕು. (ಮೀಸಲಾತಿ ಕೋರಿದ್ದಲ್ಲಿ)
5. ಶಾಲಾ / ಕಾಲೇಜಿನ ಮುಖ್ಯೋಪಾಧ್ಯಾಯರು / ಪ್ರಾಂಶುಪಾಲರಿಂದ ಪಡೆದ ಒಂದು ನಡತೆ ಪ್ರಮಾಣ ಪತ್ರ ಹಾಗೂ ಸ್ಥಳೀಯ ಇಬ್ಬರು ಗಣ್ಯ ವ್ಯಕ್ತಿಗಳಿಂದ ಪಡೆದ 6 ತಿಂಗಳ ಇತ್ತೀಚಿನ ಎರಡು ನಡತೆ ಪ್ರಮಾಣ ಪತ್ರಗಳ ಪ್ರತಿ ಸಲ್ಲಿಸಬೇಕು.
6. ಅಂಗವಿಕಲ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ವೈದ್ಯಕೀಯ ಪ್ರಮಾಣ ಪತ್ರವನ್ನು ದಿನಾಂಕ 19.11.2005ರ ಸರ್ಕಾರದ ಅಧಿಕೃತ ಜ್ಞಾಪನಾ ಸಂಖ್ಯೆ: ಸಿಆಸುಇ 115 ಸೆನೆನಿ 2005 ರಲ್ಲಿ ನಿಗದಿಪಡಿಸಿದ ನಮೂನೆಯಲ್ಲಿ ಅಂಗವಿಕಲತೆಯ ಬಗ್ಗೆ ಜಿಲ್ಲಾ ಮಟ್ಟದ ವೈದ್ಯಕೀಯ ಮಂಡಳಿಯಿಂದ ಪ್ರಮಾಣ ಪತ್ರವನ್ನು ಪಡೆದು ಸಲ್ಲಿಸಬೇಕು.
7. ಗ್ರಾಮೀಣ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ/96/ಸೇನನಿ / 2005, ದಿನಾಂಕ: 10.08.2005ರ ಪ್ರಕಾರ ನಿಗದಿತ ನಮೂನೆ – 2ರಲ್ಲಿ ಅಧಿಕೃತ ಅಧಿಕಾರಿಗಳಿಂದ ಪಡೆದು ಅದನ್ನು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಮೇಲು ಸಹಿ ಮಾಡಿಸಿ ಸಲ್ಲಿಸಬೇಕು. ಗ್ರಾಮೀಣ ಮೀಸಲಾತಿ ಕೋರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳ ಮೀಸಲಾತಿ ಪ್ರಮಾಣ ಪತ್ರಗಳು ತಿರಸ್ಕೃತಗೊಂಡಲ್ಲಿ ಅವರು ಗ್ರಾಮೀಣ ಮೀಸಲಾತಿಗೂ ಅನರ್ಹರಾಗುತ್ತಾರೆ.
8. ಗ್ರಾಮೀಣ ಮೀಸಲಾತಿಯನ್ನು ಕೋರು ಸಾಮಾನ್ಯ ವರ್ಗದ ಅಭ್ಯರ್ಥಿಗಳು ಪ್ರಮಾಣ ಪತ್ರ ನಮೂನೆ – 2ರ ಜೊತೆ ನಮೂನೆ – 1 ರಲ್ಲೂ ದೃಢೀಕರಣ ಪತ್ರವನ್ನು ಸಲ್ಲಿಸುವುದು.

ಅಭ್ಯರ್ಥಿಗಳಿಗೆ ಸೂಚನೆ :

1. ಅಭ್ಯರ್ಥಿಯು ಈ ಅಧಿಸೂಚನೆಯಲ್ಲಿ ಲಗತ್ತಿಸಿದ ನಿಗದಿತ ಅರ್ಜಿ ನಮೂನೆಯಲ್ಲಿ ಬೆರಳಚ್ಚು ಮಾಡಿಸಿದ ಅಥವಾ ಗಣಕೀಕೃತ ಅರ್ಜಿಯನ್ನು ತನ್ನ ಕೈ ಬರವಣಿಗೆಯಲ್ಲಿ ಭರ್ತಿ ಮಾಡಿ ಸಲ್ಲಿಸತಕ್ಕದ್ದು. ಸರಿಯಾಗಿ ಅಂಕಣಗಳನ್ನು ಭರ್ತಿಮಾಡದೇ ಇರುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

2. ಒಂದಕ್ಕಿಂತ ಹೆಚ್ಚು ಹುದ್ದೆಗಳಿಗೆ ಅರ್ಜಿ ಹಾಕಲು ಬಯಸುವವರು ಆಯಾ ಹುದ್ದೆಗಳಿಗೆ ಪ್ರತ್ಯೇಕವಾಗಿ ಅರ್ಜಿಗಳನ್ನು ಸಲ್ಲಿಸತಕ್ಕದ್ದು.

3. ಅಭ್ಯರ್ಥಿಯು ಇತ್ತೀಚಿನ ಪಾಸ್‌ಪೋರ್ಟ್ ಸೈಜ್ ಪೋಟೋವನ್ನು ಅರ್ಜಿ ನಮೂನೆಯಲ್ಲಿ ತೋರಿಸಿರುವ ಜಾಗದಲ್ಲಿ ಅಂಟಿಸಿ ಅದರ ಮೇಲೆ ಸಹಿ ಮಾಡತಕ್ಕದ್ದು.

4. ಅರ್ಜಿ ನಮೂನೆಯೊಂದಿಗೆ ಸಲ್ಲಿಸಬೇಕಾಗಿರುವ ಶೈಕ್ಷಣಿಕ ವಿದ್ಯಾರ್ಹತೆಯ ಅಂಕಪಟ್ಟಿಗಳನ್ನು ಹಾಗೂ ಇತರೆ ಪ್ರಮಾಣ ಪತ್ರಗಳನ್ನು ಸ್ವಯಂ ದೃಢೀಕರಿಸತಕ್ಕದ್ದು. ಅರ್ಜಿಯೊಂದಿಗೆ ಮೂಲ ಪ್ರತಿಗಳನ್ನು ಲಗತ್ತಿಸುವ ಅವಶ್ಯಕತೆ ಇರುವುದಿಲ್ಲ. ಲಗತ್ತಿಸಿದ ಪ್ರಮಾಣ ಪತ್ರಗಳು ಅರ್ಜಿ ಸಲ್ಲಿಸುವ ದಿನಾಂಕದ ಒಳಗೆ ಪಡೆದಿರಬೇಕು.

5. ಅಭ್ಯರ್ಥಿಗಳು ಅರ್ಜಿಯೊಂದಿಗೆ ತಮ್ಮ ನಡತೆ ಮತ್ತು ಶೀಲದ ಬಗ್ಗೆ ತಮ್ಮ ಸಂಬಂಧಿಯಲ್ಲದ ಸಮಾಜದ ಇಬ್ಬರು ಗಣ್ಯ ವ್ಯಕ್ತಿಗಳಿಂದ ಪಡೆದ ಎರಡು ಪ್ರಮಾಣ ಪತ್ರಗಳನ್ನು ಹಾಗೂ ಕೊನೆಯಲ್ಲಿ ವ್ಯಾಸಂಗ ಮಾಡಿದ ಶಾಲೆ / ವಿದ್ಯಾಲಯದಿಂದ ಪಡೆದ ಒಂದು ಪ್ರಮಾಣ ಪತ್ರವನ್ನು ಲಗತ್ತಿಸತಕ್ಕದ್ದು.

6. ಅಭ್ಯರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸಿ ಅರ್ಹ ಅಭ್ಯರ್ಥಿಗಳಿಗೆ ಮಾತ್ರ 1:5 ರ ಅನುಪಾತದಲ್ಲಿ ಸಂದರ್ಶನಕ್ಕೆ ಕರೆ ನೀಡಲಾಗುವುದು.

7. ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕವು ಸಾರ್ವತ್ರಿಕ ರಜಾ ದಿನವಾಗಿ ಘೋಷಿಸಲ್ಪಟ್ಟರೆ ಆ ದಿನಾಂಕದ ಮಾರನೆಯ ಕೆಲಸದ ದಿನವು ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕವಾಗುವುದು.

ಇತರೆ ಸೂಚನೆಗಳು :

1. ಅಭ್ಯರ್ಥಿಗಳು ನೇಮಕಾತಿ ಸಂಬಂಧದಲ್ಲಿ ಯಾವುದೇ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅನುಸರಿಸುವುದು ಕಂಡು ಬಂದಲ್ಲಿ ಅಂತಹವರನ್ನು ನೇಮಕಾತಿಗೆ ಪರಿಗಣಿಸಲಾಗುವುದಿಲ್ಲ.

2. ಅಪೂರ್ಣವಾಗಿರುವ, ಸಹಿ ಮಾಡದ ಮತ್ತು ವಿದ್ಯಾರ್ಹತೆ, ಮೀಸಲಾತಿ ಹಾಗೂ ವಯೋಮಿತಿ ರಿಯಾಯಿತಿ ಬಗ್ಗೆ ಸಂಬಂಧಪಟ್ಟ ದಾಖಲೆಗಳನ್ನು ಹೊಂದಿರದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

3. ಸರ್ಕಾರಿ ಮತ್ತು ಅರೆ ಸರ್ಕಾರಿ ಸೇವೆಯಲ್ಲಿರುವ ಅಭ್ಯರ್ಥಿಗಳು ತಮ್ಮ ನೇಮಕಾತಿ ಪ್ರಾಧಿಕಾರದಿಂದ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ಪಡೆದು, ಅರ್ಜಿಗಳನ್ನು ಸಂಬಂಧಿತ ನೇಮಕಾತಿ ಪ್ರಾಧಿಕಾರದ ಮೂಲಕ ಕಳುಹಿಸಬೇಕು.

4. ಅರ್ಜಿದಾರರು ದಪ್ಪ ಅಕ್ಷರಗಳಲ್ಲಿ ಲಕೋಟೆಯ ಮೇಲೆ ಹುದ್ದೆಯ ಹೆಸರನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು.

5. ಅಭ್ಯರ್ಥಿಗಳು ತಮ್ಮ ಅರ್ಜಿಯೊಂದಿಗೆ 5–00 ರೂಪಾಯಿ ಅಂಚೆ ಮುದ್ರಾಂಕ (ಪೋಸ್ಟಲ್ ಸ್ಟಾಂಪ್) ವನ್ನು ಹೊಂದಿರುವ ಸ್ವ – ವಿಳಾಸದ ಲಕೋಟೆಯನ್ನು ಸಲ್ಲಿಸತಕ್ಕದ್ದು.

6. ಅಭ್ಯರ್ಥಿಗೆ ಸಂದರ್ಶನಕ್ಕೆ ಹಾಜರಾಗಲು ಮಾಹಿತಿ ಸಿಗದಿದ್ದ ಪಕ್ಷದಲ್ಲಿ ಅವರು ಸಂದರ್ಶನಕ್ಕೆ ಹಾಜರಾಗಲು ಅನರ್ಹರೆಂದು ತಿಳಿಯತಕ್ಕದ್ದು. ಈ ಬಗ್ಗೆ ಕಛೇರಿಯೊಂದಿಗೆ ಯಾವುದೇ ಪತ್ರ ವ್ಯವಹಾರವನ್ನು ನಡೆಸಲು ಆಸ್ಪದವಿರುವುದಿಲ್ಲ.

7. ವಿವರಗಳನ್ನು ಕಾಲಂಗಳಲ್ಲಿ ಭರ್ತಿ ಮಾಡಿ ಬರೆದು ಅರ್ಜಿಗಳನ್ನು ಅಂಚೆ ಮೂಲಕ ಸಲ್ಲಿಸುವುದು ಅಥವಾ ಖುದ್ದಾಗಿ ತಂದು ಸಲ್ಲಿಸಿದಲ್ಲಿ ಈ ಕಛೇರಿಯ ವೇಳೆಯಲ್ಲಿ ಮಾತ್ರ ಸ್ವೀಕರಿಸಲಾಗುವುದು.

8. ನೈತಿಕ ದುರ್ನಡತೆಯಿಂದಾಗಿ / ನೀತಿಬಾಹಿರ ಚಟುವಟಿಕೆಗಳಿಂದಾಗಿ ನ್ಯಾಯಾಲಯದಿಂದ ಶಿಕ್ಷೆಗೊಳಪಟ್ಟಿರುವ ವ್ಯಕ್ತಿ ಅಥವಾ ರಾಜ್ಯ / ಕೇಂದ್ರ / ಸ್ಥಳೀಯ ಸಂಸ್ಥೆ ಕಛೇರಿಗಳಲ್ಲಿ ನೈತಿಕ ದುರ್ನಡತೆಯಿಂದಾಗಿ ಅಥವಾ ನೀತಿಬಾಹಿರ ಚಟುವಟಿಕೆಗಳಲ್ಲಿ ಒಳಗಾಗಿ ಅಥವಾ ಆಯ್ಕೆಯಾದ ಅಭ್ಯರ್ಥಿಯು ಬದಲಿಯಾಗಿ ಕಾರ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಕಾನೂನು ಬಾಹಿರ/ ನೀತಿ ಬಾಹಿರ ಚಟುವಟಿಕೆಗಳಲ್ಲಿ ತೊಡಗಿ ಸೇವೆಯಿಂದ ತೆಗೆದು ಹಾಕಿದ್ದಲ್ಲಿ / ವಜಾ ಮಾಡಲ್ಪಟ್ಟಿದ್ದು ಕಂಡು ಬಂದಲ್ಲಿ ನೇಮಕಾತಿಗೆ ಅನರ್ಹರಾಗುತ್ತಾರೆ.

9. ಅರ್ಜಿಯಲ್ಲಿ ತಪ್ಪು ಮಾಹಿತಿ ನೀಡಿ ಉದ್ಯೋಗ ಪಡೆಯುವ ಅಭ್ಯರ್ಥಿಗಳನ್ನು ಯಾವುದೇ ಸಮಯದಲ್ಲಾದರೂ ವಜಾ ಮಾಡಲಾಗುತ್ತದೆ.

10. ಅಭ್ಯರ್ಥಿಗಳ ಆಯ್ಕೆಯ ವಿಷಯದಲ್ಲಿ ಆಯ್ಕೆ ಪ್ರಾಧಿಕಾರದ ನಿರ್ಧಾರವೇ ಅಂತಿಮವಾಗಿರುತ್ತದೆ.

11. ಪಿಂಚಣಿ ಸೌಲಭ್ಯ : ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ(ಎಸ್‌ಪಿಎಲ್) 04 ಪಿಇಟಿ 2005, ದಿನಾಂಕ 31.03.2006 ರಂತೆ.

12. ಕೊನೆಯ ದಿನಾಂಕದ ನಂತರ ಸಲ್ಲಿಸಲಾದ ಯಾವುದೇ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಅಂಚೆ ಮೂಲಕ ನಿಗದಿತ ದಿನಾಂಕದ ನಂತರ ಬಂದ ಅರ್ಜಿಗಳನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ.

13. ಮೇಲ್ಕಂಡ ಹುದ್ದೆಗಳ ಸಂಖ್ಯೆ ಬದಲಾವಣೆಗೊಳ್ಳುವ ಸಂಭವವಿದೆ.

ಮಾಸ್ಟರ್ ಆರ್‌ಕೆಜಿಎಂಎಂ ಮಹಾಸ್ವಾಮೀಜಿ
ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಾಮರಾಜನಗರ.

ಅರ್ಜಿ ನಮೂನೆ

ಇತ್ತೀಚಿನ ಭಾವಚಿತ್ರ ಲಗತ್ತಿಸಿ ಸಹಿ ಮಾಡುವುದು

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
ಚಾಮರಾಜನಗರ.

ಮಾನ್ಯರೇ,

ಚಾಮರಾಜನಗರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಪ್ರಕಟಣೆ ಸಂಖ್ಯೆ: ಎಡಿಎಂಎನ್/............/2012 ದಿನಾಂಕ 12.04.2012ರ ಪ್ರಕಾರ ಶೀಘ್ರಲಿಪಿಗಾರರ / ಬೆರಳಚ್ಚುಗಾರರ ಹುದ್ದೆಗೆ ನಾನು ಈ ಮೂಲಕ ನನ್ನ ವಿವರದೊಂದಿಗೆ ಅರ್ಜಿ ಸಲ್ಲಿಸಿರುತ್ತೇನೆ.

1	ಅಭ್ಯರ್ಥಿಯ ಹೆಸರು				
2	ತಂದೆಯ / ತಾಯಿಯ / ಗಂಡನ ಹೆಸರು				
3	ಪೂರ್ಣ ವಿಳಾಸ				
4	ದೂರವಾಣಿ ಸಂಖ್ಯೆ (ಕಡ್ಡಾಯವಾಗಿ ನಮೂದಿಸುವುದು)				
5	ಜನ್ಮ ದಿನಾಂಕ ಮತ್ತು ವಯಸ್ಸು				
6	ಲಿಂಗ	ಪುರುಷ / ಮಹಿಳೆ			
7	ವಿವಾಹಿತರಾಗಿದ್ದರೆ ಗಂಡನ ಅಥವ ಹೆಂಡತಿಯ ಹೆಸರು				
8	ಯಾವ ಮೀಸಲಾತಿಯಡಿಯಲ್ಲಿ ನೇಮಕಾತಿ ಅಪೇಕ್ಷಿಸುವಿರಿ				
9	ರಾಷ್ಟ್ರೀಯತೆ : ಜಾತಿ / ಉಪಜಾತಿ :				
10	ಶೈಕ್ಷಣಿಕ ವಿದ್ಯಾರ್ಹತೆಯ ವಿವರಗಳು : (ಸ್ವಯಂ ದೃಢೀಕೃತ ಪ್ರಮಾಣ ಪತ್ರಗಳನ್ನು ಸಲ್ಲಿಸತಕ್ಕದ್ದು)				
	ಉತ್ತೀರ್ಣ ಹೊಂದಿದ ಪರೀಕ್ಷೆಗಳು	ಉತ್ತೀರ್ಣ ಹೊಂದಿದ ವರ್ಷ ಮತ್ತು ನೊಂದಣಿ ಸಂಖ್ಯೆ:	ಗರಿಷ್ಠ ಅಂಕಗಳು	ಪಡೆದಿರುವ ಅಂಕಗಳು	ಶೇಕಡಾವಾರು ಅಂಕಗಳು
ಎ	ಎಸ್.ಎಸ್.ಎಲ್.ಸಿ. / ತತ್ಸಮಾನ ಪರೀಕ್ಷೆ				
ಬಿ	ಹಿರಿಯ ದರ್ಜೆಯ ಕನ್ನಡ ಬೆರಳಚ್ಚು ಪರೀಕ್ಷೆ				
ಸಿ	ಹಿರಿಯ ದರ್ಜೆಯ ಆಂಗ್ಲ ಬೆರಳಚ್ಚು ಪರೀಕ್ಷೆ				

ಡಿ	ಹಿರಿಯ ದರ್ಜೆಯ ಕನ್ನಡ ಶೀಘ್ರಲಿಪಿ ಪರೀಕ್ಷೆ				
ಇ	ಹಿರಿಯ ದರ್ಜೆಯ ಆಂಗ್ಲ ಶೀಘ್ರಲಿಪಿ ಪರೀಕ್ಷೆ				
ಎಫ್	ಇತರೆ ವಿದ್ಯಾರ್ಹತೆಗಳು ಇದ್ದಲ್ಲಿ				
11	ಜಾತಿ / ಅಂಗವಿಕಲ / ಗ್ರಾಮೀಣ ಮೀಸಲಾತಿ ಸೌಲಭ್ಯ ಪಡೆಯ ಬಯಸುವ ಅಭ್ಯರ್ಥಿಗಳು ಸಂಬಂಧಪಟ್ಟ ಅಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರ ಲಗತ್ತಿಸಬೇಕು.				
12	ನೀವು ಪ್ರಸ್ತುತ ಸರ್ಕಾರಿ ಸೇವೆಯಲ್ಲಿರುವಿರಾ? (ಸರ್ಕಾರಿ ಸೇವೆಯಲ್ಲಿದ್ದಲ್ಲಿ ನೇಮಕಾತಿ ಪ್ರಾಧಿಕಾರದಿಂದ ಪಡೆದ ನಿರಾಕ್ಷೇಪಣ ಪತ್ರದ ನಕಲನ್ನು ಲಗತ್ತಿಸಬೇಕು)				
13	ಸಲ್ಲಿಸಲು ಇಚ್ಛೆ ಪಡುವ ಇತರೆ ಯಾವುದಾದರೂ ವಿವರಗಳು				

ಸೂಚನೆ : ಅಭ್ಯರ್ಥಿಯು ತನಗೆ ಅನ್ವಯವಾಗದ್ದನ್ನು ಹೊಡೆದು ಹಾಕತಕ್ಕದ್ದು .

ಘೋಷಣೆ

ಈ ಮೇಲೆ ನಮೂದಿಸಿರುವ ಮಾಹಿತಿ ಮತ್ತು ವಿವರಗಳು ನನಗೆ ತಿಳಿದ ಮಟ್ಟಿಗೆ ಸತ್ಯವಾಗಿದ್ದು ಹಾಗೂ ಒಂದು ವೇಳೆ ಅವು ಅಸತ್ಯವೆಂದು ಕಂಡು ಬಂದಲ್ಲಿ ನನ್ನ ಅಭ್ಯರ್ಥಿತನವನ್ನು ಬಿಟ್ಟು ಬಿಡಲು ನಾನು ಬದ್ಧನಾಗಿರುತ್ತೇನೆ / ಬದ್ಧಳಾಗಿರುತ್ತೇನೆ. ನಾನು ಆಯ್ಕೆಗೊಂಡರೆ ಚಾಮರಾಜನಗರ ಜಿಲ್ಲಾ ನ್ಯಾಯಾಂಗ ಘಟಕದ ಯಾವುದೇ ನ್ಯಾಯಾಲಯಗಳಲ್ಲಿ ಕರ್ತವ್ಯ ನಿರ್ವಹಿಸಲು ಸಿದ್ದನಿದ್ದೇನೆ / ಸಿದ್ದಳಿದ್ದೇನೆ.

ಸ್ಥಳ :

ದಿನಾಂಕ : ಅಭ್ಯರ್ಥಿಯ ಸಹಿ

ಪಿ.ಆರ್. 71

ಅಧ್ಯಕ್ಷರು ಹಾಗೂ ಜಿಲ್ಲಾಧಿಕಾರಿಯವರ ಕಛೇರಿ, ಜಿಲ್ಲಾ ಮಟ್ಟದ ನೇಮಕಾತಿ ಸಮಿತಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ,

ಸಂಖ್ಯೆ:-ಇಎಕ್ಸ್ಇ/ಎಪಿಟಿ/ವಾಚಾ/02/2011-12 ಬೆಂಗಳೂರು, ದಿನಾಂಕ:-12-04-2012

<u>ಅಧಿಕೃತ ಜ್ಞಾಪನ</u>

ವಿಷಯ:- ಅಬಕಾರಿ ಇಲಾಖೆಯಲ್ಲಿ ಖಾಲಿ ಇರುವ ವಾಹನ ಚಾಲಕರ ಹುದ್ದೆಗಳನ್ನು ನೇರ ನೇಮಕಾತಿಯಿಂದ ಭರ್ತಿ ಮಾಡುವ ಬಗ್ಗೆ.

ಉಲ್ಲೇಖ:- (1) ಸರ್ಕಾರದ ಪತ್ರ ಸಂಖ್ಯೆ:-ಆಇ/150/ಇಸಿಎಸ್/2010, ದಿನಾಂಕ:-11-03-2011.

(2) ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಅಧಿಸೂಚನೆ ಸಂಖ್ಯೆ:-ಡಿಪಿಎಆರ್/ಎಸ್‌ಬಿಸಿ/2001, ದಿನಾಂಕ:-21-11-2001.

(3) ಸರ್ಕಾರದ ಆದೇಶ ಸಂಖ್ಯೆ:-ಎಫ್‌ಡಿ/31/ಇಪಿಎಸ್/99, ದಿನಾಂಕ:-03-06-1999.

(4) ಅಬಕಾರಿ ಆಯುಕ್ತರ ಪತ್ರ ಸಂಖ್ಯೆ:-ಇಸಿಇ/31/ವಾಚಾ/ನೇಮಕಾತಿ/2008, ದಿನಾಂಕ:-17-11-2011.

ಕರ್ನಾಟಕ ಸರ್ಕಾರದ ಪತ್ರ ಸಂಖ್ಯೆ:-ಆಇ/150/ಇಸಿಎಸ್/2010, ದಿನಾಂಕ:-11-03-2011ರಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಅಬಕಾರಿ ಇಲಾಖೆಯಲ್ಲಿ ಖಾಲಿ ಇರುವ ವಾಹನ ಚಾಲಕರ 2 ಹುದ್ದೆಗಳನ್ನು ನೇರ ನೇಮಕಾತಿಯಿಂದ ಭರ್ತಿ ಮಾಡಲು ಆರ್ಥಿಕ ಇಲಾಖೆಯಿಂದ ಸಹಮತಿ ನೀಡಿರುವುದರಿಂದ ಸದರಿ ಎರಡು ಹುದ್ದೆಗಳನ್ನು ಉಲ್ಲೇಖ(2)ರ ಅಧಿಸೂಚನೆಯನ್ವಯ ಹಾಗೂ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳು, ಪ್ರಚಲಿತ ಸರ್ಕಾರಿ ನಿಯಮಗಳು, ಕರ್ನಾಟಕ ನಾಗರೀಕ ಸೇವಾ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇರ ನೇಮಕಾತಿ ಮತ್ತು ಆಯ್ಕೆ)

(ಸಾಮಾನ್ಯ)ನಿಯಮಗಳು 2006ರಂತೆ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಈ ಕಛೇರಿಯಿಂದ ನಿಗಧಿಪಡಿಸಿದ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಹುದ್ದೆಗಳ ವಿವರ

1. ಹುದ್ದೆ:–ವಾಹನ ಚಾಲಕರು
2. ಹುದ್ದೆಗಳ ಸಂಖ್ಯೆ:–02(ಎರಡು)
3. ಹುದ್ದೆಗಳ ವರ್ಗೀಕರಣ:ಬಿಂದು ಸಂಖ್ಯೆ1 ಮತ್ತು 2

	ಇತರೆ	ಮಹಿಳಾ	ಗ್ರಾಮೀಣಾ	ಮಾ.ಸೈ	ಕ.ಮಾ.ಅ	ಯೋ.ಅ	ಅಂ.ವಿ	ಒಟ್ಟು
ಅ) ಪ.ಜಾ	1	–	–	–	–	–	–	1
ಋ) ಸಾ.ಅ	1	–	–	–	–	–	–	1

4. ವೇತನ ಶ್ರೇಣಿ ರೂ.5800–100–6000–125–6500–150–7100–175–7800–200–8600–225–9500–250–10500

ಶೈಕ್ಷಣಿಕ ವಿದ್ಯಾರ್ಹತೆ:–

5. ಅಭ್ಯಥಿಗಳು ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ 7ನೇ ತರಗತಿ ಉತ್ತೀರ್ಣರಾಗಿರಬೇಕು. ಹಾಗೂ ಅದಕ್ಕಿಂತ ಹೆಚ್ಚಿನ ವಿದ್ಯಾರ್ಹತೆಯನ್ನು ಪರಿಗಣಿಸಲಾಗುವುದು.
6. ಅಭ್ಯರ್ಥಿಗಳು ವಾಹನ ಚಾಲನೆ ರಹದಾರಿ (Driving Licence)ಯ ದೃಢೀಕೃತ ಪ್ರತಿಯನ್ನು ಸಲ್ಲಿಸತಕ್ಕದ್ದು.

ವಯೋಮಿತಿ:–

7. ಈ ಪ್ರಕಟಣೆಯ ದಿನಾಂಕಕ್ಕೆ ಅಭ್ಯರ್ಥಿಯ ವಯಸ್ಸು ಕನಿಷ್ಟ 18 ವರ್ಷ ಪೂರೈಸಿರತಕ್ಕದ್ದು, ಈ ಕೆಳಗಿನ ಗರಿಷ್ಟ ವಯೋಮಿತಿಯನ್ನು ಮೀರಿರಬಾರದು.

ಎಸ್.ಸಿ	18–40
ಎಸ್.ಟಿ	18–40
ಸಾಮಾನ್ಯ	18–35

8. ಅರ್ಜಿ ಸಲ್ಲಿಸುವ ಲಕೋಟೆಯ ಮೇಲೆ **ಅಬಕಾರಿ ಇಲಾಖೆಯ ವಾಹನ ಚಾಲಕರ ಹುದ್ದೆಯ ನೇಮಕಾತಿಗಾಗಿ ಅರ್ಜಿ** ಎಂದು ಸ್ಪಷ್ಟವಾಗಿ ದಪ್ಪ ಅಕ್ಷರಗಳಲ್ಲಿ ನಮೂದಿಸತಕ್ಕದ್ದು.
9. ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದವರಿಗೆ ಅರ್ಜಿ ಶುಲ್ಕವಿರುವುದಿಲ್ಲ. ಸಾಮಾನ್ಯ ವರ್ಗದವರಿಗೆ ರೂ.5/–ಗಳ ಐ.ಪಿ.ಓ(ಇಂಡಿಯನ್ ಪೋಸ್ಟಲ್ ಆರ್ಡರ್) ನ್ನು ಈ ಕಛೇರಿಗೆ ನೇರವಾಗಿ ಸಲ್ಲಿಸಿ ಅರ್ಜಿಯನ್ನು ಕಛೇರಿಯ ವೇಳೆಯಲ್ಲಿ ಪಡೆಯಬಹುದು. ಅಥವಾ ಅಂಚೆ ಮೂಲಕ ಪಡೆಯಬಹುದು,
10. ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ:–21–05–2012ರ ಸಂಜೆ 5–30ನಂತರ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ವಿಳಂಭವಾಗಿ ಬಂದ ಅರ್ಜಿಗಳ ಬಗ್ಗೆ ಅರ್ಜಿದಾರರೆ ಜವಾಬ್ದಾರಾಗಿರುತ್ತಾರೆ.

ಶುಲ್ಕದ ವಿವರ ಕೆಳಕಂಡಂತಿದೆ.

ಸಾಮಾನ್ಯ ಅಭ್ಯರ್ಥಿಗಳಿಗೆ ಶುಲ್ಕ (ಪೋಸ್ಟಲ್ ಆರ್ಡರ್ ಮೂಲಕ)	ರೂ.5/–
ಪ.ಜಾತಿ/ಪ/ಪಂ./ಮಹಿಳಾ ಅಭ್ಯರ್ಥಿಗಳಿಗೆ ಶುಲ್ಕ	ಶುಲ್ಕ ರಹಿತ

11. ಅರ್ಜಿ ಶುಲ್ಕವನ್ನು ಮರುಪಾವತಿಸಲಾಗುವುದಿಲ್ಲ.
12. ಅರ್ಜಿ ನಮೂನೆಯನ್ನು ಅಗತ್ಯ ಧೃಢೀಕೃತ ದಾಖಲೆಗಳೊಂದಿಗೆ ಸಲ್ಲಿಸತಕ್ಕದ್ದು. ಅಪೂರ್ಣವಾದ ಮಾಹಿತಿ/ ದಾಖಲೆಗಳಿದ್ದಲ್ಲಿ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
13. ಜಾತಿ ಮತ್ತು ಆದಾಯ ಧೃಢೀಕರಣ ಪತ್ರ ಅಥವಾ ಅದರ ಧೃಢೀಕೃತ ಪೋಟೊ ಕಾಪಿಗಳನ್ನು ಸಲ್ಲಿಸದಿದ್ದಲ್ಲಿ ಅಭ್ಯರ್ಥಿಯನ್ನು ಸಾಮಾನ್ಯ ಅಭ್ಯರ್ಥಿಯೆಂದು ಪರಿಗಣಿಸಲಾಗುವುದು.(ಪ್ರಮಾಣ ಪತ್ರವು ಈ ಅಧಿಕೃತ ಜ್ಞಾಪನ ಪತ್ರ ಪ್ರಕಟವಾದ ಇತ್ತೀಚಿನದಾಗಿರಬೇಕು. ಮತ್ತು ಚಾಲ್ತಿ ವರ್ಷದಲ್ಲಿ ಪಡೆದ ಆದಾಯ ದೃಢೀಕರಣ ಪತ್ರದ ಧೃಢೀಕೃತ ಪ್ರತಿಗಳನ್ನು ಸಲ್ಲಿಸತಕ್ಕದ್ದು.

14. ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳು, ಪ್ರಚಲಿತ ಸರ್ಕಾರಿ ನಿಯಮಗಳು, ಕರ್ನಾಟಕ ನಾಗರೀಕ ಸೇವಾ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇರ ನೇಮಕಾತಿ ಮತ್ತು ಆಯ್ಕೆ)(ಸಾಮಾನ್ಯ) ನಿಯಮಗಳು 2006ರಂತೆ ನೇಮಕಾತಿ ಮಾಡಲಾಗುವುದು.

15. ಮೀಸಲಾತಿ ಸೌಲಭ್ಯ ಅಪೇಕ್ಷಿಸುವ ಅಭ್ಯರ್ಥಿಗಳು ಈ ಕೆಳಕಂಡ ದಾಖಲೆ ಪ್ರತಿಗಳನ್ನು ಅರ್ಜಿ ಸಲ್ಲಿಸುವ ದಿನಾಂಕದಂದು ನಿಗದಿತ ನಮೂನೆಯಲ್ಲಿ ಸಂಬಂಧಪಟ್ಟ ರೆವಿನ್ಯೂ ಪ್ರಾಧಿಕಾರದಿಂದ ಪಡೆದು (ಸರ್ಕಾರಿ ಅಧಿಸೂಚನೆ ಸಂಖ್ಯೆ:-ಎಸ್ ಡಬ್ಲ್ಯೂಡಿ/132/ಎಸ್ ಎಡಿ/97, ದಿನಾಂಕ:-08-02-2000 ಕ್ರಮವಾಗಿ ನಮೂನೆ-1 ಮತ್ತು 2 ರಲ್ಲಿ)ಲಗತ್ತಿಸಬೇಕು. ತಪ್ಪಿದ್ದಲ್ಲಿ ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ರದ್ದು ಪಡಿಸಿ, ಅವರ ಅಭ್ಯರ್ಥಿತನವನ್ನು ನಿಯಾಮಾನುಸಾರ ಸಾಮಾನ್ಯ ಅಭ್ಯರ್ಥಿ ಅಡಿಯಲ್ಲಿ ಪರಿಗಣಿಸಲಾಗುವುದು.

16. ಭರ್ತಿ ಮಾಡಿದ ಅರ್ಜಿಗಳನ್ನು ನೊಂದಣಿ ಅಂಚೆ ಮೂಲಕ ಸಲ್ಲಿಸಬಯಸುವ ಅಭ್ಯರ್ಥಿಗಳು ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ವಾಹನ ಚಾಲಕರ ನೇಮಕಾತಿ ಪ್ರಾಧಿಕಾರ, ಜಿಲ್ಲಾಧಿಕಾರಿಗಳ ಕಛೇರಿ, ಪೋಡಿಯಂ ಬ್ಲಾಕ್, 2ನೇ ಮಹಡಿ, ವಿ.ವಿ.ಟವರ್ಸ್, ಡಾ:ಅಂಬೇಡ್ಕರ್ ವೀದಿ, ಬೆಂಗಳೂರು-560001 ಇವರ ವಿಳಾಸಕ್ಕೆ ಸಲ್ಲಿಸತಕ್ಕದ್ದು. ಖುದ್ದಾಗಿ ಸ್ವೀಕರಿಸಲಾಗುವುದಿಲ್ಲ.

ಜಾತಿ ಮೀಸಲಾತಿ ಪ್ರಮಾಣ ಪತ್ರಗಳು:

17. ಪರಿಶಿಷ್ಟ ಜಾತಿ ಅಭ್ಯರ್ಥಿಗಳು ನಮೂನೆ-ಡಿ ಯಲ್ಲಿ

18. ಸಾಮಾನ್ಯ ಅಭ್ಯರ್ಥಿಗಳು ನಮೂನೆ-ಎಫ್ ನಲ್ಲಿ

19. ಇಬ್ಬರು ಸ್ಥಳೀಯ ಗಣ್ಯ ವ್ಯಕ್ತಿಗಳಿಂದ 6 ತಿಂಗಳ ಒಳಗೆ ಪಡೆದಿರುವ ನಡತೆ ಪ್ರಮಾಣ ಪತ್ರ ಲಗತ್ತಿಸುವುದು.

20. ವಾಹನ ಚಾಲಕರ ನೇಮಕಾತಿಗೆ ಅಭ್ಯರ್ಥಿಗಳು ಪ್ರಥಮ ಚಿಕಿತ್ಸಾ ಪ್ರಮಾಣ ಪತ್ರ ಹೊಂದಿರಬೇಕು. ಅಭ್ಯರ್ಥಿಗಳನ್ನು ಶಾರೀರಿಕ ಮಟ್ಟ ದಕ್ಷತೆಯ ಬಗ್ಗೆ ವೈದ್ಯಕೀಯ ಪ್ರಮಾಣ ಪತ್ರ (ಇದನ್ನು ಅಸಿಸ್ಟೆಂಟ್ ಸರ್ಜನ್ -ಗ್ರೇಡ್ ನಂ-1 ಇದಕ್ಕಿಂತ ಕಡಿಮೆ ದರ್ಜೆಯ ಅಧಿಕಾರಿಗಳು ನೀಡಬಾರದು)

21. ಆಯ್ಕೆಯಾದ ಅಭ್ಯರ್ಥಿಗಳು ಪೋಲೀಸ್ ತರಬೇತಿ ಮತ್ತು ನಿರ್ವಾಹಣಾ ಶಾಲೆಯಿಂದ ವಾಹನ ಚಾಲನೆ ಪ್ರಮಾಣ ಪಡೆದು ಸಲ್ಲಿಸತಕ್ಕದ್ದು.

22. ಈ ಕಛೇರಿಯು ಅಭ್ಯರ್ಥಿ ಅರ್ಜಿಯ ವಿಚಾರದಲ್ಲಿ ಅವರೊಂದಿಗೆ ಯಾವುದೇ ಪತ್ರ ವ್ಯವಹಾರವನ್ನು ನಡೆಸುವುದಿಲ್ಲ. ವಿಳಾಸ ಬದಲಾವಣೆಯಾದಲ್ಲಿ ಅಭ್ಯರ್ಥಿಗಳು ಲಿಖಿತ ಮನವಿ ಮೂಲಕ ಈ ಕಛೇರಿಯ ಗಮನಕ್ಕೆ ತರತಕ್ಕದ್ದು. ವಿಳಾಸ ಬದಲಾವಣೆಯನ್ನು ಪರಿಗಣಿಸುವ ಬಗ್ಗೆ ನೇಮಕಾತಿ ಪ್ರಾಧಿಕಾರದ ವ್ಯಾಪ್ತಿಗೆ ಒಳಪಟ್ಟಿರುತ್ತದೆ,

23. ವ್ಯಕ್ತಿಯು ತಾನೇ ಮತ್ತೊಬ್ಬನೆಂದು ವರ್ತಿಸುವುದು(IMPERSONATION) ಅಥವಾ ತಿದ್ದಿದ ದಾಸ್ತಾವೇಜು ಗಳನ್ನು ಸಲ್ಲಿಸಿರುವುದು ಇಲ್ಲವೇ ಸುಳ್ಳು ಹೇಳಿಕೆ ನೀಡಿರುವುದು ಖಚಿತವಾದಲ್ಲಿ ಕ್ರಿಮಿನಲ್ ಪ್ರಕರಣಕ್ಕೆ ಅಥವಾ ಶಿಸ್ತು ಪ್ರಕರಣಕ್ಕೆ ಒಳಪಡಿಸುವುದಲ್ಲದೇ ನೇಮಕಾತಿಯನ್ನು ರದ್ದುಪಡಿಸಲಾಗುವುದು.

24. ಸರ್ಕಾರಿ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಅಭ್ಯರ್ಥಿಗಳು ಅರ್ಜಿಯನ್ನು ನೇಮಕಾತಿ ಪ್ರಾಧಿಕಾರ/ ಇಲಾಖಾ ಮುಖ್ಯಸ್ಥರ ಮುಖಾಂತರ ಸಲ್ಲಿಸುವುದು,

25. ಅಭ್ಯರ್ಥಿಯು ತನ್ನ ಇತ್ತೀಚಿನ ಭಾವಚಿತ್ರಗಳನ್ನು ಬಲಗಡೆ ಮೇಲ್ಭಾಗದಲ್ಲಿ ಇರುವ ಚೌಕದಲ್ಲಿ ಅಂಟಿಸಬೇಕು.

26. ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳು ಎಲ್ಲಾ ಮೂಲ ದಾಖಲಾತಿಗಳನ್ನು ಹಾಜರುಪಡಿಸತಕ್ಕದ್ದು.

ಅರ್ಹತಾ ಷರತ್ತುಗಳು:-

27. ಭಾರತೀಯ ನಾಗರೀಕನಾಗಿರತಕ್ಕದು.

28. ಅಭ್ಯರ್ಥಿಯು ಮಾನಸಿಕವಾಗಿ/ದೈಹಿಕವಾಗಿ ಆರೋಗ್ಯವಂತಾರಾಗಿರಬೇಕು.

29. ತಪಾಸಣೆ ನಡೆಸಿದ ವೈದ್ಯರ ವರದಿಯ ಮೇಲೆ ಅನರ್ಹ ಎಂಬುದಾಗಿ ತಿರಸ್ಕರಿಸುವಂತಹ ಪೂರ್ಣ ವಿವೇಚನೆಯನ್ನು ನೇಮಕಾತಿ ಸಮಿತಿಯು ಕಾಯ್ದುಕೊಂಡಿದೆ.

30. ನೇಮಕಗೊಂಡ ಅಭ್ಯರ್ಥಿಯು ನಿಯಾಮಾನುಸಾರ 2 ವರ್ಷಗಳ ಪರಿವೀಕ್ಷಣಾ ಅವಧಿ(ಖಾಯಂ ಪೂರ್ವ ಸೇವಾ ಅವಧಿ)ಯಲ್ಲಿ ಇರುತ್ತಾರೆ.

31. ಕರ್ನಾಟಕ ರಾಜ್ಯದ ಯಾವುದೇ ಸರ್ಕಾರಿ ಇಲಾಖೆ/ಕೇಂದ್ರ ಸರ್ಕಾರಿ ಇಲಾಖೆ ಅಥವಾ ಅರೆ ಸರ್ಕಾರಿ ಸ್ವಾಮ್ಯದ ಸಂಸ್ಥೆಯ ಸೇವೆಯಿಂದ ವಜಾಗೊಂಡಿರುವ ನೌಕರರು ನೇಮಕಾತಿಗೆ ಅರ್ಹರಲ್ಲ.

32. ಅಭ್ಯರ್ಥಿಗೆ ಸಂದರ್ಶನಕ್ಕೆ ಹಾಜರಾಗಲು ಮಾಹಿತಿ ಸಿಗದಿದ್ದ ಪಕ್ಷದಲ್ಲಿ ಅವರು ಸಂದರ್ಶನಕ್ಕೆ ಅನರ್ಹರೆಂದು ತಿಳಿಯತಕ್ಕದ್ದು. ಈ ಬಗ್ಗೆ ಕಛೇರಿಯೊಂದಿಗೆ ಯಾವುದೇ ಪತ್ರ ವ್ಯವಹಾರವನ್ನು ನಡೆಸಲು ಅಸ್ಪದ ಇರುವುದಿಲ್ಲ.

33. ಅಭ್ಯರ್ಥಿಯು ಒಂದೇ ಹುದ್ದೆಗೆ ಒಂದಕ್ಕಿಂತ ಹೆಚ್ಚಿನ ಅರ್ಜಿಯನ್ನು ಭರ್ತಿ ಮಾಡಿ ಬೇರೆ ಬೇರೆ ಅರ್ಜಿಗಳಲ್ಲಿ ವಿಭಿನ್ನವಾದ ಮಾಹಿತಿಗಳನ್ನು ನಮೂದಿಸಿದ್ದಲ್ಲಿ ಅಂತಹ ಅಭ್ಯರ್ಥಿಯು ಸಲ್ಲಿಸಿದ ಎಲ್ಲಾ ಅರ್ಜಿಗಳನ್ನು ತಿರಸ್ಕರಿಸಲಾಗುವುದು,

34. ಅರ್ಜಿಯಲ್ಲಿ ತಪ್ಪು ಮಾಹಿತಿ ನೀಡಿ, ಉದ್ಯೋಗ ಪಡೆಯುವ ಅಭ್ಯರ್ಥಿಗಳನ್ನು ಯಾವುದೇ ಸಮಯದಲ್ಲಾದರೂ ವಜಾ ಮಾಡಲಾಗುವುದು.

35. ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಸಂದರ್ಶನಕ್ಕೆ ಹಾಜರಾಗತಕ್ಕದು. ಸಂದರ್ಶನಕ್ಕೆ ಬರಲು ಯಾವುದೇ ಸಾರಿಗೆ ವೆಚ್ಚ ಅಥವಾ ಇತರೆ ಖರ್ಚುಗಳನ್ನು ಭರಿಸಲಾಗುವುದಿಲ್ಲ.

ಜಿಲ್ಲಾಧಿಕಾರಿ ಮತ್ತು ಅಧ್ಯಕ್ಷರು,
ವಾಹನ ಚಾಲಕರ ನೇಮಕಾತಿ ಪ್ರಾಧಿಕಾರ,
ಬೆಂಗಳೂರು ಗ್ರಾಮಾಂತರ ಜಿಲ್ಲೆ,
ಬೆಂಗಳೂರು, ಇವರ ಪರವಾಗಿ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಅಬಕಾರಿ ಇಲಾಖೆಯಲ್ಲಿ ಖಾಲಿ ಇರುವ ವಾಹನ ಚಾಲಕರ ಹುದ್ದೆಗಳ ನೇಮಕಾತಿಗಾಗಿ ಅರ್ಜಿ ನಮೂನೆ.

ಭಾವ ಚಿತ್ರ

1	ಅರ್ಜಿದಾರರ ಪೂರ್ಣ ಹೆಸರು (ದಪ್ಪ ಅಕ್ಷರಗಳಲ್ಲಿ)	
2	ಅ)ಪೂರ್ಣ ಅಂಚೆ ವಿಳಾಸ	
	ಆ)ಖಾಯಂ ವಿಳಾಸ	
3	ವಿದ್ಯಾರ್ಹತೆ	
4	ಹುಟ್ಟಿದ ದಿನಾಂಕ ಮತ್ತು ವಯಸ್ಸು(ದಿನಾಂಕ:20–04–2012)ಕ್ಕೆ	
5	ಜಾತಿ(ಪ.ಜಾತಿ/ಪ.ಪಂ/ಪ್ರವರ್ಗ–1, 2ಎ,2ಬಿ/3ಎಹಾಗೂ 3ಬಿ) ದೃಢೀಕೃತ ಪತ್ರ ಸಹಿತ	
6	ವಾಹನದ ಲೈಸನ್ಸ್ ಬಗ್ಗೆ ವಿವರ	
7	ಪ್ರಥಮ ಚಿಕಿತ್ಸಾ ತರಬೇತಿ ಪಡೆಯಲಾಗಿದೆಯೇ/ಇಲ್ಲವೇ?/ಹೌದೇ	
8	ಇತರೆ ಜಿಲ್ಲೆಗೂ ಅರ್ಜಿ ಸಲ್ಲಿಸಿದ್ದಲ್ಲಿ ಮಾಹಿತಿ ನೀಡುವುದು.	

ಅಭ್ಯರ್ಥಿಯ ಸಹಿ/–

ಷರತ್ತುಗಳು:

1. 7ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು. ಧೃಢೀಕೃತ ಅಂಕಪಟ್ಟಿ ಲಗತ್ತಿಸಬೇಕು.

2. ಅಭ್ಯರ್ಥಿಯ ವಯಸ್ಸು ದಿನಾಂಕ:-20-04-2012ಕ್ಕೆ 18 ವರ್ಷ ತುಂಬಿರಬೇಕು ಮತ್ತು ಸಾಮಾನ್ಯ ಅಭ್ಯರ್ಥಿಗೆ 35 ವರ್ಷ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ 40 ವರ್ಷ ಮೀರಿರಬಾರದು. ಜನ್ಮ ದಿನಾಂಕದ ದೃಢೀಕೃತ ಪ್ರಮಾಣ ಪತ್ರ ಲಗತ್ತಿಸಬೇಕು.

3. ಚಾಲ್ತಿಯಲ್ಲಿರುವ ವಾಹನ ಚಾಲಕ ಲೈಸನ್ಸ್‌ನ್ನು ಮತ್ತು ಪ್ರಥಮ ಚಿಕಿತ್ಸಾ ಪ್ರಮಾಣ ಪತ್ರವನ್ನು ಹೊಂದಿರಬೇಕು. ಹಾಗೂ ಶಾರೀರಿಕ ಮಟ್ಟ ದಕ್ಷತೆಯ ಬಗ್ಗೆ ವೈದ್ಯಕೀಯ ಪ್ರಮಾಣ ಪತ್ರ ಇದನ್ನು ಅಸಿಸ್ಟೆಂಟ್ ಸರ್ಜನ್ (ಗ್ರೇಡ್ ನಂ-1)ಇದಕ್ಕಿಂತ ಕಡಿಮೆ ದರ್ಜೆಯ ಅಧಿಕಾರಿಗಳು ನೀಡಿರಬಾರದು ದೃಢೀಕೃತ ಜೆರಾಕ್ಸ್ ಪ್ರತಿ ಲಗತ್ತಿಸಬೇಕು.

4. ಅಭ್ಯರ್ಥಿಯು ಆಯ್ಕೆಯಾದ ನಂತರ ಪೊಲೀಸ್ ಡ್ರೈವಿಂಗ್ ಮತ್ತು ನಿರ್ವಹಣಾ ಶಾಲೆಯಲ್ಲಿ ನಡೆಸಲಾದ ಪರೀಕ್ಷೆಯ ದೃಢೀಕರಣ ಪತ್ರದ ಜೆರಾಕ್ಸ್ ಪ್ರತಿಯನ್ನು ನೀಡಬೇಕು.

5. ಸ್ಥಳೀಯ ಇಬ್ಬರು ಗಣ್ಯರಿಂದ ನಡತೆ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು.

6. ಅರ್ಜಿಯ ಎಲ್ಲಾ ಕಾಲಂಗಳನ್ನು ತುಂಬತಕ್ಕದ್ದು.

7. ಅಪೂರ್ಣಗೊಂಡ ಅರ್ಜಿಯನ್ನು ಹಾಗೂ ಕೊನೆಯ ದಿನಾಂಕದ ನಂತರದ ಅರ್ಜಿಯನ್ನು ಮಾನ್ಯ ಮಾಡಲಾಗುವುದಿಲ್ಲ.

8. ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ:-21-05-2012ರ ಸಂಜೆ 5-30ರೊಳಗಾಗಿ.

9. ರೂ.5/-ಪೋಸ್ಟಲ್ ಆರ್ಡರ್ ಲಗತ್ತಿಸುವುದು((ಪ.ಜಾತಿ/ಪ.ಪಂ ಹೊರತುಪಡಿಸಿ)

10. ಅರ್ಜಿಸಲ್ಲಿಸಬೇಕಾದ ವಿಳಾಸ:

ಜಿಲ್ಲಾಧಿಕಾರಿಗಳು ಮತ್ತು ಅಧ್ಯಕ್ಷರು,
ವಾಹನ ಚಾಲಕರ ನೇಮಕಾತಿ ಪ್ರಾಧಿಕಾರ,
ಪೋಡಿಯಂ ಬ್ಲಾಕ್, 2ನೇಮಹಡಿ, ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು-560001

ಪಿ.ಆರ್. 73

ಕರ್ನಾಟಕ ಲೋಕಸೇವಾ ಆಯೋಗ

ವಿಷಯ:- 2011ನೇ ಸಾಲಿನ ಪ್ರಥಮ ಅಧಿವೇಶನದ ಇಲಾಖಾ ಪರೀಕ್ಷೆಯಲ್ಲಿ ಶ್ರೀ ಸುರೇಶ್ ಹೆಚ್. ವೈದ್ಯಾಧಿಕಾರಿ ಮತ್ತು ಶ್ರೀ ವಿಜಯಕುಮಾರ್ ಕಿರಿಯ ತರಬೇತಿ ಅಧಿಕಾರಿ ಇವರುಗಳು ಕನ್ನಡ ಭಾಷಾ ವಿಷಯದ ಪರೀಕ್ಷೆಯಲ್ಲಿ ದುರಾಚಾರ ಎಸಗಿರುವ ಪ್ರಕರಣಕ್ಕೆ ದಂಡನೆ ವಿಧಿಸುವ ಕುರಿತು.

ಓದಲಾಗಿದೆ:- (1) ಶ್ರೀ ಸುರೇಶ್ ಹೆಚ್. (ನೋಂ.ಸಂಖ್ಯೆ27252) ಶ್ರೀ ವಿಜಯಕುಮಾರ್ (ನೋಂ.ಸಂಖ್ಯೆ35181) ಇವರುಗಳಿಗೆ ಆಯೋಗದ ಕಾರಣ ಕೇಳುವ ನೋಟೀಸ್ ಜಾರಿ ಮಾಡಿದ ಸಂಖ್ಯೆ: ಇಪ(1)1023-1024/2011-12/ಪಿಎಸ್‌ಸಿ, ದಿನಾಂಕ:28-09-2011.

(2) ಶ್ರೀಯುತರ ಸಮಜಾಯಿಷಿ ದಿನಾಂಕಗಳು:04-10-2011 ಮತ್ತು 07-10-2011ರ ಹೇಳಿಕೆ.

(3) ಆಯೋಗದ ವಿಚಾರಣೆ ನೋಟೀಸ್ ಸಂಖ್ಯೆ.ಸಿಓಎನ್ 323/ 2011-12/ಪಿಎಸ್‌ಸಿ ದಿನಾಂಕ:24-01-2012

(4) ವಿಚಾರಣಾಧಿಕಾರಿಯವರ ವಿಚಾರಣಾ ವರದಿ ದಿನಾಂಕ:14-02-2012.

(5) ದಿನಾಂಕ:15-03-2012ರ ಆಯೋಗದ ನಡಾವಳಿಗಳು

ಪ್ರಸ್ತಾವನೆ:-

ಆಯೋಗವು ನಡೆಸಿದ 2011ನೇ ಸಾಲಿನ ಪ್ರಥಮ ಅಧಿವೇಶನದ ಇಲಾಖಾ ಪರೀಕ್ಷೆಯ ಸಂಬಂಧ ದಿನಾಂಕ:07-07-2011 ರಂದು ನಡೆಸಲಾದ ಕನ್ನಡ ಭಾಷಾ ವಿಷಯದ ಪರೀಕ್ಷೆಯ ಪತ್ರಿಕೆ-1ರ ಉತ್ತರಪತ್ರಿಕೆಗಳ ಮೌಲ್ಯಮಾಪನ ಕಾರ್ಯವನ್ನು ದಿನಾಂಕ: 29-07-2011 ರಂದು ನಡೆಸಲಾಗಿದ್ದು, ಈ ಸಂದರ್ಭದಲ್ಲಿ ಪರೀಕ್ಷಕರು ನೀಡಿರುವ ವರದಿಯಂತೆ ನೋಂದಣಿ ಸಂಖ್ಯೆ.27252ರ ಅಭ್ಯರ್ಥಿ ಶ್ರೀ ಸುರೇಶ್ ಹೆಚ್. ವೈದ್ಯಾಧಿಕಾರಿ, ಪ್ರಾಥಮಿಕ ಆರೋಗ್ಯ ಕೇಂದ್ರ, ಚಿತ್ರಹಳ್ಳಿ ಕ್ರಾಸ್, ಹೊಳಲ್ಕೆರೆ ತಾಲ್ಲೂಕು ಚಿತ್ರದುರ್ಗ ಜಿಲ್ಲೆ-577501. ಮತ್ತು ನೋಂದಣಿ ಸಂಖ್ಯೆ.35181ರ ಅಭ್ಯರ್ಥಿ ಶ್ರೀ ವಿಜಯಕುಮಾರ್ ಎನ್. ಕಿರಿಯ ತರಬೇತಿ ಅಧಿಕಾರಿ, ಉದ್ಯೋಗ ಮತ್ತು ತರಬೇತಿ ಇಲಾಖೆ, ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರ, ಬಿ.ಇ.ಎಂ.ಎಲ್ ನಗರ, ಕೆ.ಜಿ.ಎಫ್-563115 ಇವರುಗಳ ಉತ್ತರ ಪತ್ರಿಕೆಗಳಲ್ಲಿ ಕೈಬರಹ ವ್ಯತ್ಯಾಸವಾಗಿದ್ದು, ಪರೀಕ್ಷೆಯಲ್ಲಿ ದುರಾಚಾರ ಎಸಗಿರುತ್ತಾರೆ ಎಂದು ದಿನಾಂಕ: 30-08-2011ರಲ್ಲಿ ರಹಸ್ಯ ಶಾಖೆಯವರು ವರದಿ ಮಾಡಿರುತ್ತಾರೆ.

ಈ ವರದಿಯ ಮೇರೆಗೆ ಉಲ್ಲೇಖ–(1)ರಲ್ಲಿ ಓದಲಾದ ದಿನಾಂಕ:28–09–2011ರ ನೋಟೀಸುಗಳಲ್ಲಿ ಆಪಾದಿತ ಅಭ್ಯರ್ಥಿಗಳಿಂದ ಲಿಖಿತ ಸಮಜಾಯಿಷಿ ಕೇಳಲಾಗಿತ್ತು. ಸದರಿ ನೋಟೀಸುಗಳಿಗೆ ಆಪಾದಿತರು ಉಲ್ಲೇಖ–(2)ರಲ್ಲಿ ಓದಲಾದ ದಿನಾಂಕ:04–10–2011 ಮತ್ತು 07–10–2011ರ ಸಮಜಾಯಿಷಿಗಳಲ್ಲಿ ಅವರುಗಳ ವಿರುದ್ಧದ ಆರೋಪಗಳನ್ನು ನಿರಾಕರಿಸಿದ್ದ ಕಾರಣ ಸದರಿ ಪ್ರಕರಣಗಳ ಸತ್ಯಾಸತ್ಯತೆಯನ್ನು ತಿಳಿಯುವ ಸಲುವಾಗಿ ಶ್ರೀಮತಿ ಆರ್.ನವಮಣಿ, ಸಹಾಯಕ ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿತ್ತು.

ವಿಚಾರಣಾಧಿಕಾರಿಗಳು ಉಲ್ಲೇಖ(4)ರಲ್ಲಿ ಓದಲಾದ ದಿನಾಂಕ:15–03–2011ರ ತಮ್ಮ ವರದಿಯಲ್ಲಿ ಶ್ರೀ ಸುರೇಶ್ ಹೆಚ್. (ನೋಂದಣಿ ಸಂಖ್ಯೆ. 27252) ಮತ್ತು ಶ್ರೀ ವಿಜಯಕುಮಾರ್ ಎನ್. (ನೋಂದಣಿ ಸಂಖ್ಯೆ. 35181) ಇವರುಗಳ ವಿರುದ್ಧ ಮಾಡಲಾದ ಆರೋಪಗಳು ಸಾಬೀತಾಗಿರುತ್ತವೆ ಎಂದು ವರದಿ ನೀಡಿರುತ್ತಾರೆ.

ವಿಚಾರಣಾಧಿಕಾರಿಗಳು ನೀಡಿದ ವರದಿಯನ್ನು ಆಯೋಗದ ಮುಂದೆ ಮಂಡಿಸಲಾಯಿತು. ಆಯೋಗವು ವಿಚಾರಣಾಧಿಕಾರಿಗಳ ವರದಿಯನ್ನು ಹಾಗೂ ಪ್ರಕರಣಗಳಿಗೆ ಸಂಬಂಧಿಸಿದಂತೆ ಒದಗಿಸಲಾದ ದಾಖಲೆ ಸಾಕ್ಷ್ಯ ಇತ್ಯಾದಿಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಅವರುಗಳ ವಿರುದ್ಧದ ಆರೋಪಗಳು ಸಾಬೀತಾಗಿರುವುದರಿಂದ ಕರ್ನಾಟಕ ಲೋಕಸೇವಾ ಆಯೋಗ (ಸೇವಾ ಪರೀಕ್ಷೆಗಳ ನಿರ್ವಹಣೆ) ನಿಯಮಗಳು, 1965ರನ್ವಯ ಹಾಗೂ ತತ್ಸಂಬಂಧದಲ್ಲಿ ಜಾರಿಗೊಳಿಸಲಾದ ಆಯೋಗದ ಅಧಿಕೃತ ಜ್ಞಾಪನ ಸಂಖ್ಯೆ. ಆಡಳಿತ398/1993–94/ಪಿಎಸ್‌ಸಿ ದಿನಾಂಕ:14–07–1993ರನ್ವಯ ಪ್ರದತ್ತವಾದ ಅಧಿಕಾರದ ಮೇರೆಗೆ ಶ್ರೀ ಸುರೇಶ್ ಹೆಚ್. (ನೋಂದಣಿ ಸಂಖ್ಯೆ. 27252) ಮತ್ತು ಶ್ರೀ ವಿಜಯಕುಮಾರ್ ಎನ್. (ನೋಂದಣಿ ಸಂಖ್ಯೆ. 35181) ಇವರುಗಳಿಗೆ 2011ನೇ ಸಾಲಿನ ಪ್ರಥಮ ಅಧಿವೇಶನದ ಇಲಾಖಾ ಪರೀಕ್ಷೆಯ ಅಭ್ಯರ್ಥಿತ್ವವನ್ನು ರದ್ದುಪಡಿಸುವ ಜೊತೆಗೆ ಆಯೋಗವು ನಡೆಸುವ ಮುಂದಿನ 2 ಅಧಿವೇಶನಗಳ ಇಲಾಖಾ ಪರೀಕ್ಷೆಗಳಿಗೆ ಹಾಜರಾಗದಂತೆ ಡಿಬಾರ್ ಮಾಡುವ ದಂಡನೆ ವಿಧಿಸುವುದು ಸೂಕ್ತವೆಂದು ಉಲ್ಲೇಖ(5)ರಲ್ಲಿ ದಿನಾಂಕ:15–03–2012ರಂದು ನಿರ್ಣಯಿಸಿರುವ ಹಿನ್ನೆಲೆಯಲ್ಲಿ ಈ ಕೆಳಕಂಡ ಆದೇಶ:–

ಆದೇಶ ಸಂಖ್ಯೆ:ಇಪ(3) 13 /2012–13/ಪಿಎಸ್‌ಸಿ, ಬೆಂಗಳೂರು ದಿನಾಂಕ: 16 –04–2012.

ಕರ್ನಾಟಕ ಲೋಕಸೇವಾ ಆಯೋಗ (ಸೇವಾ ಪರೀಕ್ಷೆಗಳ ನಿರ್ವಹಣೆ) 1965ರ ನಿಯಮ 14ರ ಹಾಗೂ ತತ್ಸಂಬಂಧದಲ್ಲಿ ಹೊರಡಿಸಲಾಗಿರುವ ಆಯೋಗದ ಅಧಿಕೃತ ಜ್ಞಾಪನಪತ್ರ ಸಂಖ್ಯೆ. ಆಡಳಿತ.398/93–94/ಪಿಎಸ್‌ಸಿ ದಿನಾಂಕ:14–07–1993ರಲ್ಲಿನಂತೆ ಪ್ರದತ್ತವಾದ ಅಧಿಕಾರದ ಮೇರೆಗೆ ನೋಂದಣಿ ಸಂಖ್ಯೆ 27252ರ ಅಭ್ಯರ್ಥಿ ಶ್ರೀ ಸುರೇಶ್ ಹೆಚ್. ವೈದ್ಯಾಧಿಕಾರಿ, ಪ್ರಾಥಮಿಕ ಆರೋಗ್ಯ ಕೇಂದ್ರ, ಚಿತ್ರಹಳ್ಳಿ ಕ್ರಾಸ್, ಹೊಳಲ್ಕೆರೆ ತಾಲ್ಲೂಕು ಚಿತ್ರದುರ್ಗ ಜಿಲ್ಲೆ–577501. ಮತ್ತು ನೋಂದಣಿ ಸಂಖ್ಯೆ 35181 ಶ್ರೀ ವಿಜಯಕುಮಾರ್ ಎನ್. ಕಿರಿಯ ತರಬೇತಿ ಅಧಿಕಾರಿ, ಉದ್ಯೋಗ ಮತ್ತು ತರಬೇತಿ ಇಲಾಖೆ, ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರ, ಬಿ.ಇ.ಎಂ.ಎಲ್ ನಗರ, ಕೆ.ಜಿ.ಎಫ್–563115 ಇವರುಗಳ ವಿರುದ್ಧದ ಆರೋಪವು ಸಾಬೀತಾಗಿರುವುದರಿಂದ ಈ ಅಭ್ಯರ್ಥಿಗಳ 2011ನೇ ಸಾಲಿನ ಪ್ರಥಮ ಅಧಿವೇಶನದ ಇಲಾಖಾ ಪರೀಕ್ಷೆಯ ಅಭ್ಯರ್ಥಿತ್ವವನ್ನು ರದ್ದುಪಡಿಸುವ ಜೊತೆಗೆ ಆಯೋಗವು ನಡೆಸುವ ಮುಂದಿನ 2 ಅಧಿವೇಶನಗಳ ಇಲಾಖಾ ಪರೀಕ್ಷೆಗಳಿಗೆ ಹಾಜರಾಗದಂತೆ ಡಿಬಾರ್ ಮಾಡುವ ದಂಡನೆ ವಿಧಿಸಿದೆ.

ವಿ.ಬಿ.ಪಾಟೀಲ್
ಕಾರ್ಯದರ್ಶಿ ಹಾಗೂ ನಿಯಂತ್ರಕರು,
ಇಲಾಖಾ ಪರೀಕ್ಷೆಗಳು,
ಕರ್ನಾಟಕ ಲೋಕಸೇವಾ ಆಯೋಗ.

ಪಿ.ಆರ್. 74

ನೇಮಕಾತಿ ಪ್ರಕಟಣೆ

ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ

ಅಧಿಸೂಚನೆ ಸಂಖ್ಯೆಃ ಎಡಿಎಂ. 1 4 /2012 , ದಿನಾಂಕಃ 18.04.2012.

ವಿಷಯ : ಶೀಘ್ರಲಿಪಿಗಾರರು, ಬೆರಳಚ್ಚುಗಾರರು, ಬೆರಳಚ್ಚು ನಕಲುಗಾರರು, ಪ್ರೋಸಸ್ ಜಾರಿಕಾರರು ಮತ್ತು ಜವಾನರ ಹುದ್ದೆಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಬಗ್ಗೆ.

ಉಲ್ಲೇಖ :
1. ಈ ಕಚೇರಿ ಅಧಿಸೂಚನೆ ಸಂಖ್ಯೆ ಆಡಳಿತ 7 /09 ದಿನಾಂಕ 3.1.2009 ರ ಅನ್ವಯ ಉಳಿದಿರುವ ಶೀಘ್ರಲಿಪಿಗಾರ (ಬ್ಯಾಕ್‌ಲಾಗ್) ಹುದ್ದೆಯನ್ನು ಭರ್ತಿ ಮಾಡಿಕೊಳ್ಳಲು.
2. ಈ ಕಚೇರಿ ಅಧಿಸೂಚನೆ ಸಂಖ್ಯೆ ಆಡಳಿತ 12 /10 ದಿನಾಂಕ 9.4.2010 ರ ಅನ್ವಯ ಉಳಿದಿರುವ ಶೀಘ್ರಲಿಪಿಗಾರರ ಮತ್ತು ಬೆರಳಚ್ಚುಗಾರರ (ಬ್ಯಾಕ್‌ಲಾಗ್) ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು.
3. ಈ ಕಚೇರಿ ಅಧಿಸೂಚನೆ ಸಂಖ್ಯೆ ಆಡಳಿತ 16 /11 ,ದಿನಾಂಕ 21.10.2011 ರ ಅನ್ವಯ ಉಳಿದಿರುವ ಶೀಘ್ರಲಿಪಿಗಾರರು, ಬೆರಳಚ್ಚುಗಾರರು ಮತ್ತು ಬೆರಳಚ್ಚು ನಕಲುಗಾರರ (ಬ್ಯಾಕ್‌ಲಾಗ್) ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು.

4. ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದ ಪತ್ರದ ಸಂಖ್ಯೆಃ ಜಿ.ಒ.ಬಿ II 326/2009, ದಿನಾಂಕಃ 11.11.2010 ರಂದು ಕಳುಹಿಸಿರುವ ಸರ್ಕಾರಿ ಆದೇಶ ಸಂಖ್ಯೆಃ ಲಾ 15 ಎಲ್‌ಸಿಇ 2010, ದಿನಾಂಕ 26.10.2010 ಮತ್ತು 12.01.2011 ರ ಅನ್ವಯ ಕೆಳಕಂಡ ಹುದ್ದೆಗಳನ್ನು ಸೃಜಿಸಲು ಮಂಜೂರಾತಿ ನೀಡಲಾಗಿದೆ.

ಮೇಲ್ಕಂಡ ಅಧಿಸೂಚನೆಯನ್ವಯ ರಾಮನಗರ ಜಿಲ್ಲಾ ನ್ಯಾಯಾಲಯ ಘಟಕದ ಅಧೀನ ನ್ಯಾಯಾಲಯಗಳಲ್ಲಿ ಖಾಲಿ ಇರುವ ಶೀಘ್ರಲಿಪಿಗಾರರು , ಬೆರಳಚ್ಚುಗಾರರು, ಬೆರಳಚ್ಚು ನಕಲುಗಾರರು, ಪ್ರೋಸಸ್ ಜಾರಿಕಾರರು ಮತ್ತು ಜವಾನರ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ನಿಗದಿ ಪಡಿಸಿದ ಅರ್ಜಿ ನಮೂನೆಯಲ್ಲಿ ಅಭ್ಯರ್ಥಿಗಳು ತಮ್ಮ ಸ್ವಂತ ಕೈಬರಹದಿಂದ ಎಲ್ಲಾ ಅಂಕಣಗಳನ್ನು ಜಾಗರೂಕತೆಯಿಂದ ಭರ್ತಿ ಮಾಡಿ **ದಿನಾಂಕಃ 23.5.2012 ರಂದು ಸಂಜೆ 4.00 ಗಂಟೆಯ ಒಳಗೆ ಸಲ್ಲಿಸತಕ್ಕದ್ದು.**

ಅರ್ಜಿಗಳನ್ನು ಸಲ್ಲಿಸಲು ನಿಗದಿ ಮಾಡಿದ ಕೊನೆಯ ದಿನಾಂಕ 23.5.2012
ಬುಧವಾರ ಸಂಜೆ 4.00 ಗಂಟೆಯವರೆಗೆ

ಖಾಲಿ ಇರುವ ಹುದ್ದೆಗಳ ವರ್ಗೀಕರಣಃ

I. <u>ಶೀಘ್ರಲಿಪಿಗಾರರ ಹುದ್ದೆ</u>

1. ಹುದ್ದೆಗಳ ಸಂಖ್ಯೆ ಃ 8
2. ವೇತನ ಶ್ರೇಣಿಃ – 7275–175–7800–200–8600–225–9500–250–10500–300–12300–350–13350 ಹಾಗೂ ಲಭ್ಯವಿರುವ ಇತರೆ ಭತ್ಯೆಗಳು
3. ಹುದ್ದೆಗಳ ವರ್ಗೀಕರಣಃ

ವರ್ಗೀಕರಣ	ಇತರೆ	ಗ್ರಾಮೀಣ	ಮಹಿಳಾ	ಮಾಜಿ ಸೈನಿಕ	ಅಂಗವಿಕಲ	ಒಟ್ಟು
ಸಾಮಾನ್ಯ (ಬ್ಯಾಕ್‌ಲಾಗ್ ಅಂ.ವಿಕಲ)	–	1	–	–	1	2
ಪ್ರವರ್ಗ I (ಬ್ಯಾಕ್‌ಲಾಗ್)	1	–	–	–	–	1
ಪ್ರವರ್ಗ II (ಎ) (ಬ್ಯಾಕ್‌ಲಾಗ್)	1	–	1	–	–	2
ಪ್ರವರ್ಗ II (ಬಿ) ಇತರೆ) (ಬ್ಯಾಕ್‌ಲಾಗ್)	1	–	–	–	–	1
ಪರಿಶಿಷ್ಟ ಜಾತಿ	–	1	–	–	–	1
ಪರಿಶಿಷ್ಟ ಪಂಗಡ (ಬ್ಯಾಕ್‌ಲಾಗ್)	1	–	–	–	–	1
ಒಟ್ಟು	**4**	**2**	**1**	**–**	**1**	**8**

<u>4. ಶೈಕ್ಷಣಿಕ ವಿದ್ಯಾರ್ಹತೆಃ</u>

ಎ) ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು ನಡೆಸುವ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣತೆ ಅಥವಾ ತತ್ಸಮಾನ ವಿದ್ಯಾರ್ಹತೆ.

ಬಿ) ಕರ್ನಾಟಕ ಪ್ರೌಢ ಶಿಕ್ಷಣ ಮಂಡಳಿಯು ನಡೆಸುವ ಹಿರಿಯ ದರ್ಜೆಯ (Senior Grade) ಕನ್ನಡ ಮತ್ತು ಆಂಗ್ಲ ಬಾಷೆಗಳ ಬೆರಳಚ್ಚು ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು ಅಥವಾ ತತ್ಸಮಾನ ವಿದ್ಯಾರ್ಹತೆ.

ಸಿ) ಕರ್ನಾಟಕ ಪ್ರೌಢ ಶಿಕ್ಷಣ ಮಂಡಳಿಯಿು ನಡೆಸುವ ಹಿರಿಯ (Senior Grade) ದರ್ಜೆಯ ಕನ್ನಡ ಮತ್ತು ಆಂಗ್ಲ ಭಾಷೆಗಳ ಶೀಘ್ರಲಿಪಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು ಅಥವಾ ತತ್ಸಮಾನ ವಿದ್ಯಾರ್ಹತೆ ಅಥವಾ ಡಿಪ್ಲೋಮೊ ಇನ್ ಸೆಕ್ರೆಟೇರಿಯಲ್/ ಕಮರ್ಷಿಯಲ್ ಪ್ರಾಕ್ಟೀಸ್‌ನಲ್ಲಿ ಕನ್ನಡ ಮತ್ತು ಆಂಗ್ಲ ಭಾಷೆಗಳ ಹಿರಿಯ ದರ್ಜೆ ಶೀಘ್ರಲಿಪಿ ಮತ್ತು ಬೆರಳಚ್ಚು ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು.

II. ಬೆರಳಚ್ಚುಗಾರರ ಹುದ್ದೆ

1. ಹುದ್ದೆಗಳ ಸಂಖ್ಯೆ : 3

2. ವೇತನ ಶ್ರೇಣಿ – 5800–100–6000–125–6500–150–7100–175–7800–200–8600–225–9500––250–10500 ಹಾಗೂ ಲಭ್ಯವಿರುವ ಇತರೆ ಭತ್ಯೆಗಳು

3. **ಹುದ್ದೆಗಳ ವರ್ಗೀಕರಣ :**

ವರ್ಗೀಕರಣ	ಇತರೆ	ಗ್ರಾಮೀಣ	ಮಹಿಳಾ	ಕನ್ನಡ ಮಾಧ್ಯಮ	ಅಂಗವಿಕಲ	ಒಟ್ಟು
ಪ್ರವರ್ಗ III (ಬಿ) (ಬ್ಯಾಕ್‌ಲಾಗ್)	1	–	–	–	–	1
ಪ್ರವರ್ಗ II(ಎ) (ಬ್ಯಾಕ್‌ಲಾಗ್)	–	–	1	–	1	2
ಒಟ್ಟು	**1**	**–**	**1**	**–**	**1**	**3**

4. ಶೈಕ್ಷಣಿಕ ವಿದ್ಯಾರ್ಹತೆ:

ಎ) ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು ನಡೆಸುವ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣತೆ ಅಥವಾ ತತ್ಸಮಾನ ವಿದ್ಯಾರ್ಹತೆ.

ಬಿ) ಕರ್ನಾಟಕ ಪ್ರೌಢ ಶಿಕ್ಷಣ ಮಂಡಳಿಯು ನಡೆಸುವ ಹಿರಿಯ ದರ್ಜೆಯ (Senior Grade) ಕನ್ನಡ ಮತ್ತು ಆಂಗ್ಲ ಬಾಷೆಗಳ ಬೆರಳಚ್ಚು ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು ಅಥವಾ ತತ್ಸಮಾನ ವಿದ್ಯಾರ್ಹತೆ.

III. ಬೆರಳಚ್ಚು–ನಕಲುಗಾರರ ಹುದ್ದೆ :

1. ಹುದ್ದೆಗಳ ಸಂಖ್ಯೆ : 2

2. ವೇತನ ಶ್ರೇಣಿ – 5800–100–6000–125–6500–150–7100–175–7800–200–8600–225–9500–250–10500 ಹಾಗೂ ಲಭ್ಯವಿರುವ ಇತರೆ ಭತ್ಯೆಗಳು

3. ಹುದ್ದೆಗಳ ವರ್ಗೀಕರಣ:

ವರ್ಗೀಕರಣ	ಇತರೆ	ಗ್ರಾಮೀಣ	ಮಹಿಳಾ	ಅಂ.ವಿಕಲ	ಒಟ್ಟು
ಸಾಮಾನ್ಯ (ಬ್ಯಾಕ್‌ಲಾಗ್)	–	–	–	1	1
ಪ್ರವರ್ಗ II (ಬಿ)	1	–	–	–	1
ಒಟ್ಟು	**1**	**–**	**–**	**1**	**2**

4. ಶೈಕ್ಷಣಿಕ ವಿದ್ಯಾರ್ಹತೆ:

ಎ) ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು ನಡೆಸುವ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣತೆ ಅಥವಾ ತತ್ಸಮಾನ ವಿದ್ಯಾರ್ಹತೆ.

ಬಿ) ಕರ್ನಾಟಕ ಪ್ರೌಢ ಶಿಕ್ಷಣ ಮಂಡಳಿಯು ನಡೆಸುವ ಕಿರಿಯ ದರ್ಜೆಯ (Junior Grade) ಕನ್ನಡ ಮತ್ತು ಆಂಗ್ಲ ಬಾಷೆಗಳ ಬೆರಳಚ್ಚು ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು ಅಥವಾ ತತ್ಸಮಾನ ವಿದ್ಯಾರ್ಹತೆ.

IV. ಪ್ರೋಸಸ್ ಜಾರಿಕಾರ ಹುದ್ದೆ:

1. ಹುದ್ದೆಗಳ ಸಂಖ್ಯೆ : 8

2. ವೇತನ ಶ್ರೇಣಿ – 5500–100–6000–125–6500–150–7100–175–7800–200–8600–225–9500 ಹಾಗೂ ಲಭ್ಯವಿರುವ ಇತರೆ ಭತ್ಯೆಗಳು

3. ಹುದ್ದೆಗಳ ವರ್ಗೀಕರಣ:

ವರ್ಗೀಕರಣ	ಇತರೆ	ಗ್ರಾಮೀಣ	ಮಹಿಳಾ	ಕನ್ನಡ ಮಾಧ್ಯಮ	ಅಂಗವಿಕಲ	ಒಟ್ಟು
ಸಾಮಾನ್ಯ	–	1	2	1	–	4
ಪರಿಶಿಷ್ಟ ಜಾತಿ	–	–	1	–	1	2
ಪ್ರವರ್ಗ II(ಎ)	–	–	1		1	2
ಒಟ್ಟು	–	**1**	**4**	**1**	**2**	**8**

4. ಶೈಕ್ಷಣಿಕ ವಿದ್ಯಾರ್ಹತೆ:

ಎ) ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು ನಡೆಸುವ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣತೆ ಅಥವಾ ತತ್ಸಮಾನ ವಿದ್ಯಾರ್ಹತೆ.

ಬಿ) ಡ್ರೈವಿಂಗ್ ಲೈಸೆನ್ಸ್ ಹೊಂದಿರುವವರಿಗೆ ಆದ್ಯತೆ ನೀಡಲಾಗುವುದು.

V. ಜವಾನರು:

1. ಹುದ್ದೆಗಳ ಸಂಖ್ಯೆ : 4
2. ವೇತನ ಶ್ರೇಣಿ – 4800–100–6000–125–6500–150–7100–175–7275 ಹಾಗೂ ಲಭ್ಯವಿರುವ ಇತರೆ ಭತ್ಯೆಗಳು
3. ಹುದ್ದೆಗಳ ವರ್ಗೀಕರಣ:

ವರ್ಗೀಕರಣ	ಇತರೆ	ಗ್ರಾಮೀಣ	ಮಹಿಳಾ	ಯೋಜನಾ ನಿರಾಶ್ರಿತರು	ಒಟ್ಟು
ಸಾಮಾನ್ಯ	–	–	1	1	2
ಪ್ರವರ್ಗ II(ಎ)	–	1	–	–	1
ಪರಿಶಿಷ್ಟ ಜಾತಿ	–	1	–	–	1
ಒಟ್ಟು	–	**2**	**1**	**1**	**4**

4. ಶೈಕ್ಷಣಿಕ ವಿದ್ಯಾರ್ಹತೆ:

ಎ) 7ನೇ ತರಗತಿಯಲ್ಲಿ ತೇರ್ಗಡೆ ಹೊಂದಿರಬೇಕು.

ಬಿ) ಅಭ್ಯರ್ಥಿಗೆ ಕನ್ನಡದಲ್ಲಿ ಓದಲು ಹಾಗೂ ಬರೆಯಲು **ತಿಳಿದಿರಬೇಕು.**

ವಯೋಮಿತಿ:

ಕನಿಷ್ಠ ವಯೋಮಿತಿ : 18 ವರ್ಷ

ಗರಿಷ್ಠ ವಯೋಮಿತಿ : ಸಾಮಾನ್ಯ ವರ್ಗ – 35 ವರ್ಷ
2ಎ, 2ಬಿ, 3ಎ, 3ಬಿ – 38 ವರ್ಷ
ಪ.ಜಾ, ಪ.ಪಂ, ಪ್ರವರ್ಗ 1 – 40 ವರ್ಷ

ವಿಧವೆಯರಿಗೆ, ಮಾಜಿ ಸೈನಿಕರಿಗೆ, ಅಂಗವಿಕಲರಿಗೆ ಹಾಗೂ ಸರ್ಕಾರಿ ಸೇವೆಯಲ್ಲಿರುವವರಿಗೆ ನಿಯಮಾನುಸಾರ ವಯೋಮಿತಿಯಲ್ಲಿ ಸಡಿಲಿಕೆ ನೀಡಲಾಗುವುದು.

ಆಯ್ಕೆ ವಿಧಾನ :

ಕರ್ನಾಟಕ ಅಧೀನ ನ್ಯಾಯಾಲಯಗಳು (ಮಿನಿಸ್ಟೀರಿಯಲ್ ಮತ್ತು ಇತರೆ ಹುದ್ದೆಗಳು) (ನೇಮಕಾತಿ) (ತಿದ್ದುಪಡಿ) ನಿಯಮಗಳು 2007ರ ಅನ್ವಯ ನೇರ ನೇಮಕಾತಿಯ ಮೂಲಕ ಆಯ್ಕೆ ಮಾಡಲಾಗುವುದು.

I. ಶೀಘ್ರಲಿಪಿಗಾರರ ಹುದ್ದೆಗೆ ಈ ಕೆಳಕಂಡ ಅರ್ಹತಾ ಪರೀಕ್ಷೆಯನ್ನು ನಡೆಸಲಾಗುವುದು.

ಅ) ಒಂದು ನಿಮಿಷಕ್ಕೆ 120 ಶಬ್ಧಗಳಂತೆ 5 ನಿಮಿಷಗಳ ಅವಧಿಯ ಉಕ್ತಲೇಖನ ಮತ್ತು ಅದನ್ನು ಲಿಪ್ಯಂತರ ಮಾಡಲು 45 ನಿಮಿಷಗಳ ಅವಧಿ. (ಗರಿಷ್ಠ 100 ಅಂಕಗಳ ಪರೀಕ್ಷೆಯಲ್ಲಿ ಕನಿಷ್ಠ 50 ಅಂಕಗಳನ್ನು ಪಡೆಯಬೇಕಾಗಿರುತ್ತದೆ).

ಆ) ಶೀಘ್ರಲಿಪಿಗಾರರ ಹುದ್ದೆಗೆ ಅವರು ಪಡೆದಿರುವ ಶೈಕ್ಷಣಿಕ ವಿದ್ಯಾರ್ಹತೆಯ ಅಂಕಗಳು ಮತ್ತು ಅರ್ಹತಾ ಪರೀಕ್ಷೆಯ ಗರಿಷ್ಠ ಅಂಕಗಳ ಆಧಾರದ ಮೇಲೆ ಒಂದು ಹುದ್ದೆಗೆ ಐದು ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆಯಲಾಗುವುದು.

II. ಬೆರಳಚ್ಚುಗಾರರ ಹಾಗೂ ಬೆರಳಚ್ಚು–ನಕಲುಗಾರರ ಹುದ್ದೆಗೆ:

ಅ) 15 ನಿಮಿಷಗಳ ಉಕ್ತಲೇಖನವನ್ನು ಬೆರಳಚ್ಚುಪಡಿಸುವ ಅರ್ಹತಾ ಪರೀಕ್ಷೆಯನ್ನು ನಡೆಸಲಾಗುವುದು (ಗರಿಷ್ಠ 100 ಅಂಕಗಳ ಪರೀಕ್ಷೆಯಲ್ಲಿ ಕನಿಷ್ಠ 50 ಅಂಕಗಳನ್ನು ಪಡೆಯಬೇಕಾಗಿರುತ್ತದೆ).

ಆ) ಸಂದರ್ಶನ

ಇ) ಶೀಘ್ರಲಿಪಿಗಾರರ / ಬೆರಳಚ್ಚುಗಾರ / ಬೆರಳಚ್ಚು–ನಕಲುಗಾರರ ಹುದ್ದೆಗಳಿಗೆ 1:5 ರ ಅನುಪಾತದಲ್ಲಿ, ನಿಗದಿಪಡಿಸಿದ ವಿದ್ಯಾರ್ಹತೆಗೆ ಅನುಗುಣವಾಗಿ, ಅತೀ ಹೆಚ್ಚು ಅಂಕ ಪಡೆದ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಆಯ್ಕೆ ಮಾಡಲಾಗುವುದು, ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಸಂದರ್ಶನಕ್ಕೆ ಹಾಜರಾಗುವುದು.

III. ಪ್ರೋಸಸ್ ಜಾರಿಕಾರರ ಹುದ್ದೆಗೆ :

ಅ) ಪ್ರೋಸಸ್ ಜಾರಿಕಾರ ಹುದ್ದೆಗೆ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಪಡೆದ ಗರಿಷ್ಠ ಅಂಕಗಳ ಅರ್ಹತೆಯ ಅಧಾರದ ಮೇಲೆ ಒಂದು ಹುದ್ದೆಗೆ 25 ಅಭ್ಯರ್ಥಿಗಳನ್ನು ಮಾತ್ರ ಸಂದರ್ಶನಕ್ಕೆ ಕರೆಯಲಾಗುವುದು.

ಆ) ಸಂದರ್ಶನಕ್ಕೆ ಕರೆಯಲಾಗುವ ಅಭ್ಯರ್ಥಿಗೆ ಕನ್ನಡದಲ್ಲಿ ಓದುವ ಹಾಗೂ ಬರೆಯುವ ಬಗ್ಗೆ ಪ್ರವೀಣತೆ ಮತ್ತು ಸಾಮಾನ್ಯಜ್ಞಾನದ ತಿಳುವಳಿಕೆಯ ಬಗ್ಗೆ ಪರೀಕ್ಷಿಸಲಾಗುವುದು.

IV. ಜವಾನರ ಹುದ್ದೆಗೆ :

ಅ) ಜವಾನರ ಹುದ್ದೆಗೆ 7ನೇ ತರಗತಿಯಲ್ಲಿ ಪಡೆದ ಗರಿಷ್ಠ ಅಂಕಗಳ ಅರ್ಹತೆಯ ಅಧಾರದ ಮೇಲೆ ಒಂದು ಹುದ್ದೆಗೆ 10 ಅಭ್ಯರ್ಥಿಗಳನ್ನು ಮಾತ್ರ ಸಂದರ್ಶನಕ್ಕೆ ಕರೆಯಲಾಗುವುದು.

V. ಹಿಂದುಳಿದ ವರ್ಗಗಳ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ ಸಾಮಾನ್ಯ ಅಭ್ಯರ್ಥಿಗಳನ್ನು ತುಂಬಲಾಗುವುದು..

ಪ್ರಮುಖವಾದ ಸೂಚನೆಗಳು:

ಅಭ್ಯರ್ಥಿಗಳು ಕೆಳಕಂಡ ಪ್ರಮಾಣ ಪತ್ರಗಳ ಒಂದೊಂದು ಛಾಯಾ ಪ್ರತಿ (ಫೋಟೋ ಕಾಪಿ/ಜೆರಾಕ್ಸ್) ಗಳನ್ನು ಸ್ವಯಂ–ದೃಢೀಕರಿಸಿ ಅರ್ಜಿಯೊಂದಿಗೆ ಲಗತ್ತಿಸಬೇಕು. ಅರ್ಜಿಯೊಂದಿಗೆ ಮೂಲ ಪ್ರತಿ (ಒರಿಜಿನಲ್) ಗಳನ್ನು ಲಗತ್ತಿಸುವ ಅವಶ್ಯಕತೆ ಇರುವುದಿಲ್ಲ.

1. ಹುದ್ದೆಗೆ ನಿಗದಿಪಡಿಸಲಾದ ವಿದ್ಯಾರ್ಹತೆಯ ಎಲ್ಲಾ ವರ್ಷಗಳ ಅಂಕಪಟ್ಟಿಗಳು ಹಾಗೂ ಪ್ರಮಾಣ ಪತ್ರಗಳು.
2. ಜನ್ಮ ದಿನಾಂಕವನ್ನು ನಮೂದಿಸಿರುವ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯ ಪ್ರಮಾಣ ಪತ್ರ, ವರ್ಗಾವಣೆ ಪ್ರಮಾಣ ಪತ್ರ, ಜನನ ದಿನಾಂಕವನ್ನು ತೋರಿಸುವ ಸಂಚಿತ ದಾಖಲೆಯ ಉದ್ಧೃತ ಭಾಗ.
3. ಗ್ರಾಮೀಣ ಮೀಸಲಾತಿ ಪ್ರಮಾಣ ಪತ್ರ ನಮೂನೆ – 1 ಮತ್ತು 2 ರಲ್ಲಿ (ಮೀಸಲಾತಿ ಕೋರಿದ್ದಲ್ಲಿ)
4. ಅಭ್ಯರ್ಥಿಯು ಕೊನೆಯಲ್ಲಿ ವಿದ್ಯಾಭ್ಯಾಸ ಮಾಡಿದ ಶಾಲಾ, ಕಾಲೇಜಿನ ಮುಖೋಪಾಧ್ಯಾಯರು, ಪ್ರಾಂಶುಪಾಲರಿಂದ ಪಡೆದ ಒಂದು ನಡತೆ ಪ್ರಮಾಣ ಪತ್ರ.
5. ಅಭ್ಯರ್ಥಿಯು ನಡತೆಯನ್ನು ದೃಢಿಕರಿಸುವ ಬಗ್ಗೆ ಅವನು ಓದಿರುವ ವಿದ್ಯಾಸಂಸ್ಥೆಗಳಿಗೆ ಸಂಬಂಧಪಡದ ಹಾಗೂ ಅಭ್ಯರ್ಥಿಯ ಸಂಬಂಧಿಗಳಲ್ಲದ ಇಬ್ಬರು ಸ್ಥಳೀಯ ಗಣ್ಯಕ್ತಿಗಳಿಂದ ಪಡೆದ 6 ತಿಂಗಳ ಈಚೆಗಿನ ಎರಡು ನಡತೆ ಪ್ರಮಾಣ ಪತ್ರಗಳು..

ಇತರೆ ಸೂಚನೆಗಳು:

1. ಸೇವೆಯಲ್ಲಿರುವ ಅಭ್ಯರ್ಥಿಗಳು ಅರ್ಜಿಯೊಂದಿಗೆ ತಮ್ಮ ಮೇಲಾಧಿಕಾರಿಗಳಿಂದ ಪಡೆದ ದೃಢೀಕರಣ ಹಾಗೂ ಅನುಮತಿ ಪ್ರಮಾಣಪತ್ರವನ್ನು ನೀಡತಕ್ಕದ್ದು.
2. ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕವು ಸಾರ್ವತ್ರಿಕ ರಜಾ ದಿನವಾಗಿ ಘೋಷಿಸಲ್ಪಟ್ಟರೆ ಆ ದಿನಾಂಕದ ಮಾರನೆಯ ಕೆಲಸದ ದಿನವು ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕವಾಗುವುದು.
3. ಅರ್ಜಿಯೊಂದಿಗೆ 6 ರೂಪಾಯಿಯ ಅಂಚೆ ಮುದ್ರಾಂಕ (Postal Stamp) ವನ್ನು ಹೊಂದಿರುವ ಸ್ವ–ವಿಳಾಸದ ಲಕೋಟೆಯನ್ನು ಸಲ್ಲಿಸತಕ್ಕದ್ದು.
4. ಅರ್ಜಿಯೊಂದಿಗೆ ಅಭ್ಯರ್ಥಿಗಳು ತಮ್ಮ ಇತ್ತೀಚಿನ ಒಂದು ಭಾವಚಿತ್ರವನ್ನು ಸ್ವ–ದೃಢೀಕರಿಸಿ ಲಗತ್ತಿಸಬೇಕು.

5. ಸಂದರ್ಶನಕ್ಕೆ ಆಯ್ಕೆಯಾದ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿಯೇ ಸಂದರ್ಶನಕ್ಕೆ ಹಾಜರಾಗಬೇಕು ಹಾಗೂ ಸಂದರ್ಶನ ಪತ್ರ ಬಾರದಿರುವ ಅಭ್ಯರ್ಥಿಗಳು ಸಂದರ್ಶನಕ್ಕೆ ಅರ್ಹರಲ್ಲವೆಂದು ಭಾವಿಸಿಕೊಳ್ಳತಕ್ಕದ್ದು.

6. ಆಯ್ಕೆಯ ಸಂಬಂಧವಾಗಿ ಸಂದರ್ಶನಕ್ಕೆ ಅನರ್ಹರಾದ ಅಭ್ಯರ್ಥಿಗಳು ಈ ಕಛೇರಿಯೊಂದಿಗೆ ಯಾವುದೇ ಪತ್ರ ವ್ಯವಹಾರವನ್ನು ನಡೆಸಲು ಆಸ್ಪದವಿರುವುದಿಲ್ಲ .

ವಿಶೇಷ ಸೂಚನೆ:

1. ಮೇಲ್ಕಂಡ ಹುದ್ದೆಗಳಿಗೆ ಅರ್ಜಿಗಳನ್ನು ರಾಮನಗರ ಜಿಲ್ಲಾ ನ್ಯಾಯಾಲಯದ ಕಛೇರಿಯಲ್ಲಿ ವಿತರಿಸಲಾಗುತ್ತದೆ.

2. ಅರ್ಜಿಗಳನ್ನು ಪಡೆಯ ಬಯಸುವ ಅಭ್ಯರ್ಥಿಯು ಕ್ರಾಸ್ ಮಾಡಿದ 10 ರೂ.ಗಳ ಭಾರತೀಯ ಪೋಸ್ಟಲ್ ಆರ್ಡರ್ ಅಥವಾ ಬ್ಯಾಂಕ್ ಡಿ.ಡಿ.ಯನ್ನು " ಜಿಲ್ಲಾ ನ್ಯಾಯಾಧೀಶರು, ರಾಮನಗರ " ರವರ ಹೆಸರಿಗೆ ಪಡೆದು ರಾಮನಗರ ಜಿಲ್ಲಾ ನ್ಯಾಯಾಲಯದ ಕಛೇರಿಗೆ ಸಲ್ಲಿಸಿ ಪಡೆಯಬಹುದು. ಪೋಸ್ಟಲ್ ಆರ್ಡರ್ ಅಥವಾ ಬ್ಯಾಂಕ್ ಡಿ.ಡಿ.ಯನ್ನು ಈ ನೇಮಕಾತಿ ಪ್ರಕಟಣಾ ದಿನದಿಂದ 15 ದಿವಸಗಳಿಗಿಂತ ಮುಂಚಿತವಾಗಿ ಪಡೆದಿರಬಾರದು. ಅಂಚೆ ಮೂಲಕ ಅರ್ಜಿ ಪಡೆಯಬಯಸುವ ಅಭ್ಯರ್ಥಿಗಳು 30 ರೂ. ಅಂಚೆ ಚೀಟಿ ಅಂಟಿಸಿದ ಸ್ವ–ವಿಳಾಸ ಬರೆದ ಲಕೋಟೆಯನ್ನು ಮತ್ತು 10 ರೂ. ಪೋಸ್ಟಲ್ ಆರ್ಡರ್ ಅಥವಾ ಬ್ಯಾಂಕ್ ಡಿ.ಡಿ.ಯ ಸಮೇತ ಕಳುಹಿಸಿದ್ದಲ್ಲಿ ಅರ್ಜಿಯನ್ನು ಕಳುಹಿಸಲಾಗುವುದು.

3. ಭರ್ತಿ ಮಾಡಿದ ಅರ್ಜಿಯ ಜೊತೆಗೆ ರೂ.50 (ಎಸ್.ಸಿ/ಎಸ್.ಟಿ ಮತ್ತು ಪ್ರವರ್ಗ–1ಕ್ಕೆ ರೂ.30) ಪೋಸ್ಟಲ್ ಆರ್ಡರ್ ಅಥವಾ ಬ್ಯಾಂಕ್ ಡಿ.ಡಿ.ಯನ್ನು "ಜಿಲ್ಲಾ ನ್ಯಾಯಾಧೀಶರು, ರಾಮನಗರ" ರವರ ಹೆಸರಿನಲ್ಲಿ ಪಡೆದು ಪ್ರೊಸೆಸಿಂಗ್ ಶುಲ್ಕವಾಗಿ ಲಗತ್ತಿಸಿ **ದಿನಾಂಕ: 23.05.2012 ರ ಬುದವಾರ ಸಂಜೆ 4.00 ಗಂಟೆಯೊಳಗೆ** ಜಿಲ್ಲಾ ನ್ಯಾಯಾಧೀಶರು, ಜಿಲ್ಲಾ ನ್ಯಾಯಾಲಯ, ರಾಮನಗರ ರವರಿಗೆ ಸಲ್ಲಿಸತಕ್ಕದ್ದು.

4. ಕೊನೆಯ ದಿನಾಂಕದ ನಂತರ ಸಲ್ಲಿಸಲಾದ ಯಾವುದೇ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ನಿಗದಿತ ಅರ್ಜಿ ನಮೂನೆಯಲ್ಲಿ ಎಲ್ಲಾ ಅಂಕಣಗಳನ್ನು ಅಭ್ಯರ್ಥಿಗಳು ತಮ್ಮ ಬರಹದಿಂದಲೇ ಭರ್ತಿ ಮಾಡಿರತಕ್ಕದ್ದು. ಸರಿಯಾಗಿ ಅಂಕಣಗಳನ್ನು ಭರ್ತಿ ಮಾಡದೇ ಇರುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.

ಪಿ.ಆರ್. 76

ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳು, ಕೆ.ಆರ್. ವೃತ್ತ, ಬೆಂಗಳೂರು

ಅಧಿಸೂಚನೆ

ಸಂಖ್ಯೆ: ಸಿಬ್ಬಂದಿ.ನಿ.ಭೂ.ನೇ.79/2011–12, ದಿನಾಂಕ: 19.04.2012

ಸರ್ಕಾರದ ಆದೇಶ ಸಂಖ್ಯೆ: ಕಂಇ 347 ಭೂದಾಸ 2011 ದಿನಾಂಕ: 29.03.2012 ರಲ್ಲಿ ನಿವೃತ್ತ ಭೂಮಾಪಕರನ್ನು ಗುತ್ತಿಗೆ ಆಧಾರದ ಮೇಲೆ ಕನಿಷ್ಟ 01 ವರ್ಷದಿಂದ ಗರಿಷ್ಟ 02 ವರ್ಷದ ಅವಧಿಗೆ ನೇಮಕಾತಿ ಮಾಡಿಕೊಳ್ಳಲು ಸರ್ಕಾರವು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಅನುಮತಿಸಿದೆ. ಆದ್ದರಿಂದ ನೇಮಕಾತಿ ಹೊಂದಲು ಇಚ್ಚಿಸುವ ನಿವೃತ್ತ ಭೂಮಾಪಕರುಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.

1. ರಾಜ್ಯದ ವಿವಿಧ ಜಿಲ್ಲೆ / ತಾಲ್ಲೂಕುಗಳಲ್ಲಿ ಬ್ಯಾಕ್‌ಲಾಗ್ ಪೋಡಿ / ತತ್ಕಾಲ್ ಪೋಡಿ ಮತ್ತು ಮೋಜಣಿ ಕೆಲಸಗಳಿಗೆ 1000 ನಿವೃತ್ತ ಭೂಮಾಪಕರುಗಳನ್ನು ಗುತ್ತಿಗೆ ಆಧಾರದ ಮೇರೆಗೆ ನೇಮಿಸಿ ಕೊಳ್ಳಲಾಗುವುದು.

2. ಭೂಮಾಪನ ಇಲಾಖೆಯಲ್ಲಿ ಭೂಮಾಪಕರು / ತಪಾಸಕರು / ಅಧೀಕ್ಷಕರು (ಕಾ.ನಿ) ಹುದ್ದೆಯಲ್ಲಿ ಸೇವೆಯನ್ನು ನಿರ್ವಹಿಸಿ, ವಯೋ ನಿವೃತ್ತಿ / ಸ್ವ ಇಚ್ಚಾ ನಿವೃತ್ತಿ ಹೊಂದಿದ ಯಾವುದೇ ನಿವೃತ್ತ ನೌಕರರು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳುತ್ತಿರುವ ನಿವೃತ್ತ ಭೂಮಾಪಕರ ಹುದ್ದೆಗೆ ಅರ್ಜಿಯನ್ನು ಸಲ್ಲಿಸಲು ಅರ್ಹರಿರುತ್ತಾರೆ.

3. ನಿವೃತ್ತ ಭೂಮಾಪಕರುಗಳು, ಗುತ್ತಿಗೆ ಆಧಾರದ ಮೇರೆಗೆ ನೇಮಕಾತಿ ಬಯಸುವವರು ದೈಹಿಕವಾಗಿ ಸದೃಡರಾಗಿರಬೇಕು ಮತ್ತು ಅರ್ಜಿಯನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕಕ್ಕೆ ವಯೋಮಿತಿ 70 ವರ್ಷ ಮೀರಿರತಕ್ಕದ್ದಲ್ಲ. ಹಾಗೂ ಅವರು ಸಲ್ಲಿಸಿರುವ ಸೇವಾವಧಿಯಲ್ಲಿ ಗಂಭೀರ ಸ್ವರೂಪದ ಆರೋಪ ಎಸಗಿ ಕಠಿಣ ದಂಡನೆಗೆ ಒಳಗಾಗಿರಬಾರದು.

4. ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುವ ನಿವೃತ್ತ ಭೂಮಾಪಕರುಗಳ ಸೇವೆಯನ್ನು ತತ್ಕಾಲ್ ಪೋಡಿ, ಬ್ಯಾಕ್‌ಲಾಗ್ ಪೋಡಿ ಮತ್ತು ಮೋಜಣಿ ಕೆಲಸಗಳಿಗೆ ಬಳಸಿಕೊಳ್ಳಲಾಗುವುದು.

5. ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳುವ ನಿವೃತ್ತ ಭೂಮಾಪಕರುಗಳು ಇಲಾಖೆಯ ವಿಶೇಷ ಪೋಡಿ ಆಂದೋಲನದಲ್ಲಿ ಗೊತ್ತುಪಡಿಸಿದ ಪ್ರಮಾಣದಂತೆ (1) ಹದ್ದುಬಸ್ತು ಭೂಪರಿವರ್ತನೆ ಮತ್ತು ಎಲ್.ಆರ್.ಎಫ್. ಪ್ರಕರಣಗಳು ಪ್ರತಿ ದಿನಕ್ಕೆ ಪ್ರತಿ ಭೂಮಾಪಕರಿಗೆ ಕನಿಷ್ಟ 2 ಕಡತಗಳು (2) ದರಖಾಸ್ತು ಮತ್ತು ಭೂಸ್ವಾಧೀನ ಪ್ರಕರಣಗಳಲ್ಲಿ ಪ್ರತಿ ದಿನಕ್ಕೆ ಪ್ರತಿ ನಿವೃತ್ತ ಭೂಮಾಪಕರಿಗೆ ಕನಿಷ್ಟ 6 ಬ್ಲಾಕುಗಳು ಹಾಗೂ (3) ಇತರ ಸರ್ಕಾರಿ ಜಮೀನುಗಳು ಉದಾಹರಣೆ "ಕೆರೆ, ಗುಂಡುತೋಪು ಇತರೆ ಪ್ರತಿ ದಿನಕ್ಕೆ ನಿವೃತ್ತ ಭೂಮಾಪಕರಿಗೆ 15 ಎಕರೆ ಹಾಗೂ ಇನ್ನುಳಿದಂತೆ

ಸರ್ಕಾರಿ ಸುತ್ತೋಲೆ ಸಂಖ್ಯೆ: ಕಂಇ 122 ಭೂದಾಸ 2005 ದಿನಾಂಕ: 10.08.2005 ರಲ್ಲಿ ನಿರ್ದಿಷ್ಟಪಡಿಸಿರುವ ಪ್ರಮಾಣಕ್ಕನುಗುಣವಾಗಿ ಕಾರ್ಯ ನಿರ್ವಹಿಸತಕ್ಕದ್ದು.

ಗುತ್ತಿಗೆ ಆಧಾರದ ಮೇಲೆ ನೇಮಕಗೊಳ್ಳುವ ನಿವೃತ್ತ ಭೂಮಾಪಕರುಗಳಿಗೆ ಅವರುಗಳು ಸೇವೆಯಲ್ಲಿ ಕಡೆಯದಾಗಿ ಡ್ರಾ ಮಾಡಿದ ವೇತನ ಭತ್ಯೆಗಳನ್ನು ಮೀರದಂತೆ ಅಧರಿಸಿ Pension plus Pension Equivalent Gratuity ಅನ್ನು ಕಡಿಮೆ ಮಾಡಿ ವೇತನವನ್ನು ಗೊತ್ತುಪಡಿಸಲಾಗುವುದು. ಮತ್ತು ಈ ರೀತಿ ಗೊತ್ತುಪಡಿಸಿದ ವೇತನ ಭತ್ಯೆಗಳನ್ನು ಆನ್-ಲೈನ್ ಮುಖಾಂತರ ಅವರ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುವುದು.

ಭೂಮಾಪನ ಇಲಾಖೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸಲು ಇಚ್ಚಿಸುವ ನಿವೃತ್ತ ಭೂಮಾಪಕರುಗಳು ಭೂಮಾಪನ ಇಲಾಖೆಯ ವೆಬ್‌ಸೈಟ್ www.bhoomi.karnataka. gov.in/sslr ನಲ್ಲಿ ಪ್ರಚುರಪಡಿಸಿದ ನಿಗದಿತ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಂಡು, ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಕೆ.ಆರ್. ವೃತ್ತ, ಬೆಂಗಳೂರು 560001 ಕ್ಕೆ ನೇರವಾಗಿ ನೋಂದಣಿ ಅಂಚೆ ಮುಖೇನ ದಿನಾಂಕ: 10.05.2012 ರೊಳಗೆ ಸಲ್ಲಿಸತಕ್ಕದ್ದು. ಅರ್ಜಿಯನ್ನು ಸಲ್ಲಿಸಲು ಯಾವುದೇ ಶುಲ್ಕವನ್ನು ನಿಗದಿಪಡಿಸಿರುವುದಿಲ್ಲ. ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಸ್ವೀಕೃತವಾಗದ ಅರ್ಜಿಗಳನ್ನು ಹಾಗೂ ಅಪೂರ್ಣತೆಯಿಂದ ಕೂಡಿದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಆಯುಕ್ತರು,
ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳು, ಬೆಂಗಳೂರು.

ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಬೆಂಗಳೂರು

ಇತ್ತೀಚಿನ (6 ತಿಂಗಳೊಳಗೆ ತೆಗೆಸಿದ ಭಾವಚಿತ್ರವನ್ನು ಬಾಕ್ಸ್‌ನೊಳಗೆ ಅಂಟಿಸತಕ್ಕದ್ದು

ನಿವೃತ್ತ ಭೂಮಾಪಕರುಗಳು ಗುತ್ತಿಗೆ ಆಧಾರದ ಮೇಲೆ
ನೇಮಕಾತಿ ಹೊಂದಲು ನಿಗದಿತ ಅರ್ಜಿ

ಅಧಿಸೂಚನೆ ಸಂ: ಸಿಬ್ಬಂದಿ.ನಿ.ಭೂ.ನೇ.79/2011-12 ದಿನಾಂಕ: 19.04.2012

1.	ಅರ್ಜಿದಾರರ ಪೂರ್ಣ ಹೆಸರು ಮೊಬೈಲ್ ನಂಬರ್ (ಇದ್ದಲ್ಲಿ) ಸ್ಥಿರ ದೂರವಾಣಿ ಸಂ: (ಇದ್ದಲ್ಲಿ) ಇ-ಮೇಲ್ ವಿಳಾಸ (ಇದ್ದಲ್ಲಿ)	
2.	ಅರ್ಜಿದಾರರ ತಂದೆಯ ಹೆಸರು	
3.	ಲಿಂಗ (ಪುರುಷ / ಮಹಿಳೆ)	ಪುರುಷ / ಮಹಿಳೆ
4.	(ಅ) ಜನ್ಮ ದಿನಾಂಕ	ದಿನಾಂಕ / ಮಾಹೆ / ಇಸವಿ
	(ಆ) ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆ ದಿನಾಂಕಕ್ಕೆ ವಯಸ್ಸು (70 ವರ್ಷ ಮೀರಿರಬಾರದು)	ವರ್ಷಗಳು / ತಿಂಗಳು / ದಿನಗಳು

5.	<u>ನಿವೃತ್ತಿ ವಿವರ</u>: (ಅ) ವಯೋ ನಿವೃತ್ತಿ ಹೊಂದಿದ ದಿನಾಂಕ ಅಥವಾ (ಆ) ಸ್ವ ಇಚ್ಛಾ ನಿವೃತ್ತಿ ಹೊಂದಿದ ದಿನಾಂಕ (ಇ) ನಿವೃತ್ತಿ ಹೊಂದಿದ ಕಛೇರಿ	ದಿನಾಂಕ | ಮಾಹೆ | ಇಸವಿ ________________ ________________
6.	ಸೇವಾವಧಿಯಲ್ಲಿ ಯಾವುದಾದರೂ ಶಿಸ್ತು ಕ್ರಮಕ್ಕೆ ಒಳಪಟ್ಟು ದಂಡನೆ ವಿಧಿಸಲಾಗಿದೆಯೇ? (ಅ) ಹೌದು ಎಂದಾದಲ್ಲಿ ದಂಡನೆಯ ಸ್ವರೂಪ	ಹೌದು | ಇಲ್ಲ ----------------------------------- -----------------------------------
7.	ದೈಹಿಕ ಸಾಮರ್ಥತೆ ಬಗ್ಗೆ ಜಿಲ್ಲಾ ಸರ್ಕಾರಿ ವೈದ್ಯಾಧಿಕಾರಿ ಗಳಿಂದ ಪಡೆದ ವೈದ್ಯಕೀಯ ಪ್ರಮಾಣ ಪತ್ರ ಮತ್ತು ದಿನಾಂಕ (ಸೂಚನೆ : ವೈದ್ಯಕೀಯ ಪ್ರ.ಪತ್ರವನ್ನು ಈ ಅಧಿಸೂಚನೆ ಹೊರಡಿಸಿದ ನಂತರದ ದಿನಾಂಕದಲ್ಲಿ ಪಡೆದಿರತಕ್ಕದ್ದು)	
8.	ಖಾಯಂ ವಿಳಾಸ ________________ ________________ ________________ ________________	ಹಂಗಾಮಿ ವಿಳಾಸ ________________ ________________ ________________ ________________
9.	ಕಾರ್ಯ ನಿರ್ವಹಿಸಲು ಇಚ್ಛಿಸಿರುವ ತಾಲ್ಲೂಕು	1. 2. 3.
10.	ನಿವೃತ್ತಿ ಮಂಜೂರಾತಿ ಆದೇಶದ ಸಂಖ್ಯೆ ಮತ್ತು ದಿನಾಂಕ (ಪತ್ರಾಂಕಿತ ಅಧಿಕಾರಿಗಳಿಂದ ದೃಡೀಕೃತ ಪ್ರತಿ ಯನ್ನು ಅರ್ಜಿಯೊಂದಿಗೆ ಲಗತ್ತಿಸುವುದು)	ಸಂಖ್ಯೆ ________________ ದಿನಾಂಕ

11.	<u>ನಿವೃತ್ತಿ ವೇತನದ ವಿವರ</u>	
	(ಅ) ನಿವೃತ್ತಿ ದಿನಾಂಕಕ್ಕೆ ಪಡೆಯುತ್ತಿದ್ದ ವೇತನ ಭತ್ಯೆಗಳು	ಮೂಲ ವೇತನ
		ತುಟ್ಟಿಭತ್ಯೆ
		ಮನೆಬಾಡಿಗೆ ಭತ್ಯೆ
		ವೈದ್ಯಕೀಯ ಭತ್ಯೆ
		ನಗರ ಪರಿಹಾರ ಭತ್ಯೆ
		ವೈಯಕ್ತಿಕ ಭತ್ಯೆ
		ವಿಶೇಷ ಭತ್ಯೆ
		ಒಟ್ಟು:–
	(ಆ) ಹಾಲಿ ಪಡೆಯುತ್ತಿರುವ ನಿವೃತ್ತಿ ವೇತನ	ಮೂಲ ವೇತನ
		ತುಟ್ಟಿಭತ್ಯೆ
		ಒಟ್ಟು:–
	(ಇ) ನಿವೃತ್ತಿ ವೇತನ ಪಡೆಯುತ್ತಿರುವ	
	(1) ಬ್ಯಾಂಕ್ ಹೆಸರು,	
	(2) ಬ್ಯಾಂಕ್ ವಿಳಾಸ	
	(3) ಬ್ಯಾಂಕ್ ಖಾತೆ ಸಂ	

ಘೋಷಣೆ

ಅರ್ಜಿಯಲ್ಲಿ ನಾನು ನೀಡಿರುವ ಎಲ್ಲಾ ಮಾಹಿತಿಗಳು ನನ್ನ ಅರಿವು ಮತ್ತು ನಂಬಿಕೆಯಂತೆ ಸತ್ಯ ಮತ್ತು ಸಮರ್ಪಕವಾಗಿರುತ್ತದೆಂದು ಘೋಷಿಸುತ್ತೇನೆ ನಾನು ಅಧಿಸೂಚನೆಯನ್ನು ಓದಿ ತಿಳಿದು ಕೊಂಡಿರುತ್ತೇನೆ. ಅರ್ಜಿಯಲ್ಲಿ ನೀಡಿರುವ ಮಾಹಿತಿಗಳು ಅಸತ್ಯ ಅಥವಾ ಅನರ್ಹತೆಯಿಂದ ಕೂಡಿದ್ದಲ್ಲಿ, ಆಯ್ಕೆಯ ಮುನ್ನ ಅಥವಾ ನಂತರ ನನ್ನ ನೇಮಕಾತಿಯನ್ನು ಆಯುಕ್ತರು ತಿರಸ್ಕರಿಸಬಹುದಾಗಿದೆ.

ನಾನು ಸೂಚನೆಗಳನ್ನು ಗಮನವಿಟ್ಟು ಓದಿದ್ದು, ಅವುಗಳನ್ನು ಪಾಲಿಸಲು ವಾಗ್ದಾನ ಮಾಡುತ್ತೇನೆ. ನಾನು ನಿಗದಿಪಡಿಸಿರುವ ವಯೋಮಿತಿ ಹಾಗೂ ಇತರೆ ಅರ್ಹತಾ ಷರತ್ತುಗಳನ್ನು ಪೂರೈಸಿರುತ್ತೇನೆ ಎಂದು ಘೋಷಿಸುತ್ತೇನೆ.

ಪಿ.ಆರ್. 77 ಅರ್ಜಿದಾರರ ಸಹಿ

PUBLIC NOTICE

Before the Motor Accident Claims Tribunal (Main)

At : Nadiad, Dist. Kheda, State : Gujarat

M.A.C.P. No. 1326/2011

Exhibit No. 13

Appl. Adv.Shri P. K. Ka. patel

Dipteshkumar Jasubhai Patel (Ka.patel)

R/o. Gor Vaga, At : Chaklasi Tal. Nadiad. Dist. Kheda **Applicant**

Versus

1. Raju Dasrath

R/o. No. 8-3479, Asif Gunj, Dist. Gulbarga. State : Karnataka **Opponent**

Whereas the applicant has filed claim petition in this Tribunal for compensation of Rs. 5,50,000/- on 7-10-2011 u/s. 166 of M.V. Act for accident caused by Truck No. KA-32-A-9903 at about 12-00 p.m. On Dt. 13-12-2010, on the crossing of Kheda-Dholka Road, Dist. Kheda and notice of this tribunal against above Opponent has been returned unserved.

This public notice is issued by the Tribunal for above Prop. Opponent No. 1 Take notice of this claim that it will be heard by the Tribunal on 23-03-2012 at 10-30 a.m. If you does not appear and file your defence, the claim will be decided ex-parte against you.

Given under my hand and seal of the Tribunal, this 31st Day of January, 2012.

Drawn by	Checked by	**Dy. Registrar**
M.W. Khristi	**K. J. Panchal**	MACT Branch
Assistant	Assistant	District Court, Kheda at Nadiad.

PUBLIC NOTICE

Before the Motor Accident Claims Tribunal (Main)

At : Nadiad, Dist. Kheda, State : Gujarat

M.A.C.P. No. 1325/2011
Exhibit No. 18
Appl. Adv.Shri P. K. Ka. patel

Nitaben W/o. Dipteshkumar, Jasubhai Patel (Ka.patel)

R/o. Gor Vaga, At : Chaklasi Tal. Nadiad. Dist. Kheda **Applicant**

Versus

1. Raju Dasrath

R/o. No. 8-3479, Asif Gunj, Dist. Gulbarga. State : Karnataka **Opponent**

Whereas the applicant has filed claim petition in this Tribunal for compensation of Rs. 6,00,000/- on 7-10-2011 u/s. 166 of M.V. Act for accident caused by Truck No. KA-32-A-9903 at about 12-00 p.m. On Dt. 13-12-2010, on the crossing of Kheda-Dholka Road, Dist. Kheda and notice of this tribunal against above Opponent has been returned unserved.

This public notice is issued by the Tribunal for above Prop. Opponent No. 1 Take notice of this claim that it will be heard by the Tribunal on 23-03-2012 at 10-30 a.m. If you does not appear and file your defence, the claim will be decided ex-parte against you.

Given under my hand and seal of the Tribunal, this 31st Day of January, 2012.

	Drawn by	Checked by	**Dy. Registrar**
	M.W. Khristi	**K. J. Panchal**	MACT Branch
PD 45	Assistant	Assistant	District Court, Kheda at Nadiad.

FORM-IV
(SEE RULE-12)
NOTICE

It is hereby notified that the undersigned has changed his name from REHANA HUSENSAB KAMAGAL to REHANA SAYEDZAHIRUDDIN SIRKHAZI.

P.D.c/n 56 **REHANA HUSENSAB KAMAGAL**

FORM-IV
(SEE RULE-12)
NOTICE

It is hereby notified that the undersigned has changed his name from SHAHEEN HUSENSAB KAMAGAL to SHAHEEN MOULAALIYANNI.

P.D.c/n 57 **SHAHEEN HUSENSAB KAMAGAL**